# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಫೆಬ್ರವರಿ 08, 2022

ಸಂಪುಟ : 48 ಸಂಚಿಕೆ : 269 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com






## ಹಿಜಾಬ್ ವಿರೋಧಿಸಿ ಹಿಂಜಾವೇ ಪ್ರತಿಭಟನೆ

ದಾವಣಗೆರೆ, ಫೆ.7- ಕಾಲೇಜಿನಲ್ಲಿ ಬುರ್ಕಾ ಅಥವಾ ಹಿಜಾಬ್ ಧರಿಸುವುದನ್ನು ವಿರೋಧಿಸಿ, ನಗರದಲ್ಲಿಂದು ಹಿಂದೂ ಜಾಗರಣ ವೇದಿಕೆ ಹಾಗೂ ಹಿಂದೂ ಯುವ ವಾಹಿನಿ ಸಂಘಟನೆಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ಸಂಘಟನೆಗಳ ಪದಾಧಿಕಾರಿಗಳು, ಕೇಸರಿ ಶಾಲು ಹಾಕಿಕೊಂಡು, ಸಮವಸ್ತ್ರ ಧರಿಸಿ, ಹಿಂದೂಸ್ಥಾನದಲ್ಲಿ ಇರುವುದಾದರೆ ಹಿಂದೂ ಹೇಳಿದಂಗೆ ಕೇಳಬೇಕು ಎಂದು ಘೋಷಣೆ ಕೂಗಿದರು. ಅಲ್ಲದೇ ಕಾಲೇಜಿನಲ್ಲಿ ಕಡ್ಡಾಯ ಸಮವಸ್ತ್ರಕ್ಕಾಗಿ ಮುಖ್ಯಮಂತ್ರಿ ಹಾಗೂ ಶಿಕ್ಷಣ ಸಚಿವರಿಗೆ ಆಗ್ರಹಿಸಿದರು.

ಜಿಲ್ಲೆಯ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಸಮಾನತೆಯ ಹೆಗ್ಗುರುತಾಗಿದ್ದ ಸಮವಸ್ತ್ರ ಧಾರಣೆ ಕುರಿತು ಮತೀಯ ಸಂಘಟನೆಗಳು ಶಾಲಾ ಶೈಕ್ಷಣಿಕ ಸಾಮರಸ್ಯವನ್ನು ಕದಡುವ ಉದ್ದೇಶದಿಂದ ಒಂದು ಕೋಮಿನ ವಿದ್ಯಾರ್ಥಿಗಳನ್ನು ಪ್ರಚೋದನೆಗೆ ಒಳಪಡಿಸಿ ಬುರ್ಕಾ/ಹಿಜಾಬ್ ಧರಿಸಿ ಕಾಲೇಜಿನ ಆವರಣದೊಳಗೆ ಪ್ರವೇಶಿಸಲು ಪ್ರಯತ್ನಿಸುವ ಘಟನೆಗಳು ನಡೆಯುತ್ತಿವೆ. ಅಲ್ಲದೇ ದಿನದಿಂದ ದಿನಕ್ಕೆ ಹಿಜಾಬ್ ವಿಷಯವನ್ನು ನೆಪವಾಗಿಸಿಕೊಂಡು ಇದೊಂದು ಅಂತರರಾಷ್ಟ್ರೀಯ ಮಟ್ಟದ ಸಮಸ್ಯೆ ಎನ್ನುವ ರೀತಿಯಲ್ಲಿ ಬಿಂಬಿಸುವ ಕೆಲಸವೂ ನಡೆಯುತ್ತಿದ್ದು, ಇದರ ಹಿಂದೆ ಕೆಲ ಮತೀಯ ಸಂಘಟನೆಗಳ ಕೈವಾಡವಿರುವುದಾಗಿ ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಒಂದು ವೇಳೆ ಸರ್ಕಾರ (3ನೇ ಪುಟಕ್ಕೆ)

## ಹಿಜಾಬ್ ಧಾರಣೆಗೆ ಅವಕಾಶ ನೀಡಲು ಆಗ್ರಹ

ದಾವಣಗೆರೆ, ಫೆ.7- ಮುಸ್ಲಿಂ ವಿದ್ಯಾರ್ಥಿನಿಯರಿಗೆ ಶಿರವಸ್ತ್ರ ಹಾಕಿಕೊಂಡು ಕಾಲೇಜಿಗೆ ಬರಲು ಸಂವಿಧಾನ ಹಕ್ಕನ್ನು ಕೊಡಬೇಕು ಎಂದು ಆಗ್ರಹಿಸಿ ನಗರದಲ್ಲಿಂದು ಮಹಿಳಾ ಹಕ್ಕುಗಳ ಹಿತರಕ್ಷಣಾ ವೇದಿಕೆ ನೇತೃತ್ವದಲ್ಲಿ ಮುಸ್ಲಿಂ ವಿದ್ಯಾರ್ಥಿಗಳು ಬೃಹತ್ ಪ್ರತಿಭಟನೆ ನಡೆಸಿದರು.

ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ವೇದಿಕೆ ಪದಾಧಿಕಾರಿಗಳು, ವಿದ್ಯಾರ್ಥಿಗಳು, ಶಿರವಸ್ತ್ರ ಮುಸ್ಲಿಮರ ಸಾಂವಿಧಾನಿಕ ಹಕ್ಕು. ಅದನ್ನು ಕಸಿಯಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಘೋಷಣೆಗಳನ್ನು ಕೂಗುತ್ತಾ, ಕೆಲ ಕಾಲ ನಿರಂತರವಾಗಿ ಪ್ರತಿಭಟಿಸಿ, ನಂತರ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಉಡುಪಿಯ ಪದವಿ ಪೂರ್ವ ಕಾಲೇಜು ಮತ್ತು ರಾಜ್ಯದ ಹಲವು ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ತಮ್ಮ ಧಾರ್ಮಿಕ ಹಕ್ಕಾಗಿರುವ ಶಿರವಸ್ತ್ರ ಧರಿಸುವುದಕ್ಕೆ ನಿರ್ಬಂಧ ಹೇರುತ್ತಿರುವ ಕಾಲೇಜು ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರ ನಡೆ ಕಾನೂನು ವಿರೋಧಿ ಹಾಗು ಅಸಂವಿಧಾನಿಕವಾಗಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಮುಸ್ಲಿಂ ಮಹಿಳೆಯರಿಗೆ ನೀಡಿದ ಧಾರ್ಮಿಕ ಸ್ವಾತಂತ್ರ್ಯ ಇದರ ಒಂದು ಭಾಗವಾಗಿದೆ. ಶಿರವಸ್ತ್ರವನ್ನು ಬಿಜೆಪಿ, ಸಂಘ ಪರಿವಾರ ತಮ್ಮ ಹಿಂದೂ ರಾಷ್ಟ್ರ ನಿರ್ಮಾಣದ ಅಜೆಂಡಾದ ಭಾಗವಾಗಿ ತೆಗೆದುಕೊಂಡು (3ನೇ ಪುಟಕ್ಕೆ)

## ಕೊರೊನಾ 3ನೇ ವಾರಕ್ಕೆ ಅಂತ್ಯ

ಬೆಂಗಳೂರು, ಫೆ. 7 - ಕೊರೊನಾ 3ನೇ ಅಲೆ ರಾಜ್ಯದಲ್ಲಿ ಫೆಬ್ರವರಿ 3ನೇ ವಾರಕ್ಕೆ ಅಂತ್ಯಗೊಳ್ಳಲಿದೆ ಎಂದು ರಾಜ್ಯ ಸರ್ಕಾರ ಅಂದಾಜಿಸಿದೆ.

ಆರೋಗ್ಯ ಇಲಾಖೆಯ ಆಯುಕ್ತ ರಣದೀಪ್ ಅವರೇ ಈ ಮಾಹಿತಿಯನ್ನು ನೀಡಿದ್ದು, ಮೂರನೇ ಅಲೆ ಮುಕ್ತಾಯದ ಹಂತಕ್ಕೆ ಬಂದಿದ್ದು, ಜನ ಆತಂಕಪಡುವ ಅಗತ್ಯವಿಲ್ಲ ಎಂದಿದ್ದಾರೆ.

ಕಳೆದ ಹತ್ತು ದಿನಗಳಿಂದ ಸೋಂಕಿನ ಪ್ರಮಾಣ ಕ್ಷೀಣಿಸುತ್ತಿದೆ.



ಮುಂದಿನ 15 ದಿನಗಳಲ್ಲಿ ಇದು ಪೂರ್ಣ ಪ್ರಮಾಣದಲ್ಲಿ ಇಳಿಕೆಯಾಗಲಿದೆ.

ತಜ್ಞರು ನೀಡಿರುವ ವರದಿಯಂತೆ ಎಲ್ಲವೂ ನಡೆದಿದೆ. ಅವರು ನೀಡಿದ ಮೊದಲ ಮಾಹಿತಿಯಂತೆ ಜನವರಿ ಪ್ರಾರಂಭದಲ್ಲಿ ಸೋಂಕಿನ ಮೂರನೇ ಅಲೆ ವ್ಯಾಪಕವಾಗಿ ರಾಜ್ಯದಲ್ಲಿ ಕಂಡಿತು ಎಂದವರು ಹೇಳಿದ್ದಾರೆ.

ಸರ್ಕಾರ ಕೆಲವು ಮುನ್ನೆಚ್ಚರಿಕೆ ಗಳನ್ನು ಕೈಗೊಂಡಿದ್ದರಿಂದ ಸೋಂಕು ದೊಡ್ಡ ಪ್ರಮಾಣದಲ್ಲಿ ಹರಡಲು ಅವಕಾಶ ನೀಡಲಿಲ್ಲ. (3ನೇ ಪುಟಕ್ಕೆ)

## 10 ಕೋಟಿ ರೂ. ಲಂಚ ಒಪ್ಪಿಕೊಂಡ ಸಿಎಂ ಸಂಬಂಧಿ

ನವದೆಹಲಿ, ಫೆ. 7 – ಮರಳು ಗಣಿಗಾರಿಕೆ ಹಾಗೂ ಅಧಿಕಾರಿಗಳ ವರ್ಗಾವಣೆಗಾಗಿ 10 ಕೋಟಿ ರೂ. ಲಂಚ ಪಡೆದಿದ್ದನ್ನು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಸಹೋದರ ಸಂಬಂಧಿ ಭೂಪಿಂದರ್ ಸಿಂಗ್ ಅಲಿಯಾಸ್ ಹನಿ ಒಪ್ಪಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ ಅಧಿಕಾರಿಗಳು ಹೇಳಿದ್ದಾರೆ.

ಅಕ್ರಮ ಹಣ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ ಫೆಬ್ರವರಿ 3ರಂದು ಭೂಪಿಂದರ್ ಸಿಂಗ್‌ರನ್ನು ವಶಕ್ಕೆ ತೆಗೆದುಕೊಂಡಿತ್ತು. ಹನಿ ಹಾಗೂ ಇತರರ ನಿವಾಸಗಳ ಮೇಲೆ ಜನವರಿ 18ರಂದು ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯ, (3ನೇ ಪುಟಕ್ಕೆ)

## ನದಿ ಜೋಡಣೆಯಲ್ಲಿ ರಾಜ್ಯಕ್ಕೆ ಸಮರ್ಪಕ ಪಾಲು ಬೇಕು: ಸಿಎಂ

ಬೆಂಗಳೂರು, ಫೆ. 7- ನದಿ ಜೋಡಣೆ ವಿಚಾರದಲ್ಲಿ ಕರ್ನಾಟಕಕ್ಕೆ ಸಮರ್ಪಕ ಪಾಲು ದೊರೆಯಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಮ್ಮ ನದಿ ಪಾತ್ರದಲ್ಲಿ ಉತ್ಪಾದನೆಯಾಗುವ ನೀರು, ನಮ್ಮ ಅಗತ್ಯ ಹಾಗೂ ಇಕ್ಕಟ್ಟಿ ಆಧರಿಸಿ ಪಾಲು ನಿರ್ಧಾರವಾಗಬೇಕೆನ್ನುವುದು ನಮ್ಮ ನಿಲುವು ಎಂದರು.

ದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿಪಿಆರ್ ಅಂತಿಮಗೊಳಿಸುವ ಮುನ್ನ ಎಲ್ಲಾ ರಾಜ್ಯಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ಕೇಂದ್ರದ ಗಮನಕ್ಕೆ ತಂದಿದ್ದೇವೆ. ನದಿ ಜೋಡಣೆಯ ವಿಷಯದಲ್ಲಿ ಏಕಾಏಕಿ ಮುಂದಡಿ (2ನೇ ಪುಟಕ್ಕೆ)

## ನರೇಗಾದಿಂದ ಹಳ್ಳಿಗಳ ಅಭಿವೃದ್ಧಿ

### ಹೊನ್ನಾಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವ ಕೆ.ಎಸ್. ಈಶ್ವರಪ್ಪ

ಹೊನ್ನಾಳಿ, ಫೆ.7- ನರೇಗಾ ಯೋಜನೆ ಜಾರಿಗೆ ಬಂದ ನಂತರ ಇಡೀ ಕರ್ನಾಟಕದಾದ್ಯಂತ ಗ್ರಾಮಾಂತರ ಪ್ರದೇಶಗಳು ಅಭಿವೃದ್ಧಿಯಾಗುತ್ತಿವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಕೆ. ಎಸ್. ಈಶ್ವರಪ್ಪ ಹೇಳಿದರು.



ಸೋಮವಾರ ಹೊನ್ನಾಳಿ ತಾಲ್ಲೂಕಿನ ಅರಕೆರೆ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ಮಿಸಲಾದ ರಾಜೀವ್ ಗಾಂಧಿ ಸೇವಾ ಕೇಂದ್ರ, ನೂತನ ಗ್ರಾಮ ಪಂಚಾಯಿತಿ ಕಟ್ಟಡ ಮತ್ತು ಘನತ್ಯಾಜ್ಯ ವಿಲೇವಾರಿ ಘಟಕ ಹಾಗೂ ಸೋಲಾರ್ ಪ್ಯಾನೆಲ್ ಉದ್ಘಾಟಿಸಿ ಅವರು ಮಾತಾನಾಡಿದರು.

ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕರ್ನಾಟಕದ 6000 ಗ್ರಾಮ ಪಂಚಾಯತಿಗಳಿಗೆ ಸ್ವಂತ ಕಟ್ಟಡ ನಿರ್ಮಿಸಲಾಗುತ್ತಿದೆ. ಗ್ರಾಮ ಪಂಚಾಯಿತಿ ಕಟ್ಟಡಗಳು ಗ್ರಾಮೀಣ ಜನರ ಬೆವರ ಹನಿಯ ಪ್ರತಿಫಲವಾಗಿವೆ. ಉದ್ಯೋಗ ಖಾತರಿ ಯೋಜನೆಯಡಿ ಈ ಹಿಂದೆ 13 ಕೋಟಿ ಮಾನವ ದಿನಗಳ ಗುರಿ ನಿಗದಿಪಡಿಸಲಾಗಿತ್ತು. ನವೆಂಬರ್ ತಿಂಗಳ ಹೊತ್ತಿಗೆ ಅವುಗಳನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಂಡು 1.40 ಕೋಟಿಗೂ ಹೆಚ್ಚಿನ ಮಾನವ ದಿನಗಳ ಬೇಡಿಕೆ ನೀಡಿ, ಆ ದಿನಗಳನ್ನು ಬಳಕೆ ಮಾಡಿಕೊಳ್ಳಲಾಗಿದೆ. ಈ ಹಿಂದೆ ಉದ್ಯೋಗ ಖಾತ್ರಿಯಡಿ ಕೆಲಸ ಮಾಡಿದ ಕಾರ್ಮಿಕರಿಗೆ ಕೂಲಿ ಪಾವತಿ ಮಾಡಲು 8 ತಿಂಗಳು ಕಾಯಬೇಕಿತ್ತು (3ನೇ ಪುಟಕ್ಕೆ)

## ಶಾಲೆಗಳಲ್ಲಿ ಸಮವಸ್ತ್ರ ಕಡ್ಡಾಯ

**ವಸ್ತ್ರಸಂಹಿತೆ ಹಿಂದಿನಿಂದಲೂ ನಡೆದುಕೊಂಡು ಬಂದಿದೆ : ಸಿಎಂ**

ಬೆಂಗಳೂರು, ಫೆ. 7- ಶಾಲಾ-ಕಾಲೇಜುಗಳಲ್ಲಿ ವಸ್ತ್ರ ಸಂಹಿತೆ ಕಡ್ಡಾಯವಾಗಿ ಜಾರಿಗೆ ತರಬೇಕೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಹಿಜಾಬ್ ಮತ್ತು ಕೇಸರಿ ಶಾಲುಗಳ ಜಟಾಪಟಿ ಇಡೀ ರಾಜ್ಯಾದ್ಯಂತ ಹರಡಿಕೊಂಡು, ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ಈ ಆದೇಶ ಮಾಡಿದ್ದಾರೆ.

ಸಂಪುಟ ವಿಸ್ತರಣೆ ಇಲ್ಲವೇ ಪುನರ್‌ರಚನೆ ಕುರಿತಂತೆ ವರಿಷ್ಠರ ಜೊತೆ ಸಮಾಲೋಚನೆ ನಡೆಸಲು ದೆಹಲಿಗೆ ತೆರಳಿರುವ ಮುಖ್ಯಮಂತ್ರಿಯವರು ಸುದ್ದಿಗಾರರೊಂದಿಗೆ ಮಾತನಾಡಿ, ಶಾಲಾ-ಕಾಲೇಜುಗಳಲ್ಲಿ ವಸ್ತ್ರ ಸಂಹಿತೆ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಅದನ್ನು ಎಲ್ಲರೂ ಪಾಲಿಸಬೇಕು ಎಂದಿದ್ದಾರೆ.

ವಸ್ತ್ರ ಸಂಹಿತೆಯ ಬಗ್ಗೆ ಸರ್ಕಾರ ಏನು ಆದೇಶ ಮಾಡಿದೆಯೋ ಅದನ್ನು ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಯಥಾವತ್ತಾಗಿ ಅನುಷ್ಠಾನಕ್ಕೆ ತರಬೇಕು.

ಶಿಕ್ಷಣ ಕಲಿಕೆ ಸಂದರ್ಭದಲ್ಲಿ ಜಾತಿ, ಮತ, ಭೇದ, ಬಡವ, ಬಲ್ಲಿದ ತಾರತಮ್ಯ ಬರಬಾರದೆಂಬ ಉದ್ದೇಶದಿಂದ ರಾಜ್ಯಾದ್ಯಂತ ಕೆಲವು ಶಿಷ್ಟಾಚಾರಗಳನ್ನು ಶಿಕ್ಷಣ ಸಂಸ್ಥೆಗಳಲ್ಲಿ ತರಲಾಗಿದೆ. ಅವುಗಳನ್ನು ಅನುಸರಿಸಬೇಕಾಗಿರುವುದು ಸಂಸ್ಥೆಯ ಆಡಳಿತದ ಕರ್ತವ್ಯ.

ವಿದ್ಯಾರ್ಥಿಗಳು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಇದಕ್ಕೆ ಪೋಷಕರು ಸಹಕಾರ ನೀಡಬೇಕೆಂದು ಮುಖ್ಯಮಂತ್ರಿ ಮನವಿ ಮಾಡಿದರು.

ವಸ್ತ್ರ ಸಂಹಿತೆಯ ಬಗ್ಗೆ ರಾಜ್ಯ ಉಚ್ಚ (2ನೇ ಪುಟಕ್ಕೆ)

## ಅಲ್ಪಸಂಖ್ಯಾತರ ತುಷ್ಟೀಕರಣ ಕೈ ಬಿಡಿ

### ಕಾಂಗ್ರೆಸ್ ಮುಖಂಡರಿಗೆ ಸಚಿವ ಈಶ್ವರಪ್ಪ ತಿರುಗೇಟು

ಹೊನ್ನಾಳಿ, ಫೆ.7- ಕಾಂಗ್ರೆಸ್ ಮುಖಂಡರು ಅಲ್ಪಸಂಖ್ಯಾತರ ತುಷ್ಟೀಕರಣ ನೀತಿಯನ್ನು ಕೈಬಿಡಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಖಾತೆ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ತಾಲ್ಲೂಕಿನ ಅರಕೆರೆ ಗ್ರಾಮದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಹಿಜಾಬ್ ಧರಿಸಿ ಕಾಲೇಜಿಗೆ ಬರುತ್ತಿರುವ ವಿದ್ಯಾರ್ಥಿಗಳಿಗೆ ಬೆಂಬಲ ವ್ಯಕ್ತಪಡಿಸುವ ಮೂಲಕ ಕಾಂಗ್ರೆಸ್ ಮುಖಂಡರು ಅಲ್ಪಸಂಖ್ಯಾತರನ್ನು ಓಲೈಸುವ ಕೆಲಸ ಮಾಡುತ್ತಿದ್ದಾರೆ. ವಿಧಾನಸಭೆಯ ವಿಪಕ್ಷ ನಾಯಕ ಸಿದ್ಧರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ಹಾಗೂ ಇತರರು ವಿದ್ಯಾರ್ಥಿಗಳು ಸಮವಸ್ತ್ರ ಧರಿಸಿ ಕಾಲೇಜುಗಳಿಗೆ ಬರಬೇಕು ಎಂಬುದಾಗಿ ಬಹಿರಂಗ ಹೇಳಿಕೆ ನೀಡಬೇಕು ಎಂದು ಒತ್ತಾಯಿಸಿದರು.

ಮನೆ, ಮಸೀದಿ, ಚರ್ಚ್‌ಗಳಲ್ಲಿ ಧರ್ಮವನ್ನು ಆಚರಿಸಬೇಕು. ಶಾಲಾ-ಕಾಲೇಜುಗಳಿಗೆ ಸಮವಸ್ತ್ರ ಧರಿಸಿ ಬರಬೇಕು. ಶಿಸ್ತು ಕಾಪಾಡಲು ಸಮವಸ್ತ್ರ ನೀತಿ ಜಾರಿಗೊಳಿಸಲಾಗಿದೆ. 1918ರಲ್ಲೇ ಕೇರಳ ಸರ್ಕಾರ ಸಮವಸ್ತ್ರ ಧರಿಸುವ ಕುರಿತು ಸ್ಪಷ್ಟ ನಿಲುವು ತಾಳಿದೆ. ಕೋರ್ಟ್ ಕೂಡ ಈ ಹಿಂದೆ ಸಮವಸ್ತ್ರದ ಬಗ್ಗೆ ತನ್ನ ನಿಲುವು ಪ್ರಕಟಿಸಿದೆ. ಆದ್ದರಿಂದ ಎಲ್ಲಾ ಧರ್ಮಗಳ ವಿದ್ಯಾರ್ಥಿಗಳೂ ಸಮವಸ್ತ್ರ ಧರಿಸಿ ಶಾಲಾ-ಕಾಲೇಜುಗಳಿಗೆ ಆಗಮಿಸಬೇಕು ಎಂದು ತಿಳಿಸಿದರು.

ಬೀದಿ ರಂಪ ಬೇಡ: (3ನೇ ಪುಟಕ್ಕೆ)

## ಕಾಂಗ್ರೆಸ್‌ನಿಂದ ಡಿಜಿಟಲ್ ಸದಸ್ಯತ್ವ ಅಭಿಯಾನ

**ರಾಜ್ಯದಲ್ಲಿ 60 ಲಕ್ಷ ಸದಸ್ಯತ್ವ ನೋಂದಣಿ ಗುರಿ : ಉಗ್ರಪ್ಪ**

ದಾವಣಗೆರೆ, ಫೆ. 7- ಕಾಂಗ್ರೆಸ್ ಪಕ್ಷದ ವತಿಯಿಂದ ರಾಜ್ಯದಲ್ಲಿ ಮಾರ್ಚ್ 31 ರವರೆಗೆ 60 ಲಕ್ಷ ಡಿಜಿಟಲ್ ಸದಸ್ಯತ್ವ ನೋಂದಣಿ ಮಾಡುವ ಗುರಿ ಹೊಂದಲಾಗಿದೆ ಎಂದು ಪಕ್ಷದ ವೀಕ್ಷಕ ವಿ.ಎಸ್. ಉಗ್ರಪ್ಪ ಹೇಳಿದರು.

ಇಂದು ಎಸ್.ಎಸ್. ಮಲ್ಲಿಕಾರ್ಜುನ್ ಗೃಹದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ಸದಸ್ಯರಿಂದ ನೋಂದಣಿ ಗೆ 5 ರೂ. ಹಾಗೂ ಡಿಜಿಟಲ್ ಗುರುತಿನ ಚೀಟಿಗೆ 10 ರೂ. ಸೇರಿ ಒಟ್ಟು 15 ರೂ. ಶುಲ್ಕ ಸಂಗ್ರಹಿಸಲಾಗುವುದು. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 25 ಸಾವಿರ ಡಿಜಿಟಲ್ ಸದಸ್ಯರನ್ನು ನೋಂದಣಿ ಮಾಡಿಕೊಳ್ಳಲಾಗುವುದು ಎಂದರು.

ಮಾರ್ಚ್ 31 ರ ನಂತರ ಸದಸ್ಯತ್ವ ಮಾಡಿಕೊಳ್ಳಲಾಗುವುದು. ಆದರೆ, ಅವರಿಗೆ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವ ಅರ್ಹತೆ ಇರುವುದಿಲ್ಲ. ಬೂತ್ ಮಟ್ಟದಿಂದ ರಾಷ್ಟ್ರೀಯ ಮಟ್ಟದವರೆಗೆ ಅಂಕಿ-ಅಂಶಗಳನ್ನೊಳಗೊಂಡ ದಾಖಲೆಗಳನ್ನು ಸಂಗ್ರಹಿಸಲಾಗುವುದು ಎಂದು ಹೇಳಿದರು.

ಇದುವರೆಗೂ ಪುಸ್ತಕ ರೂಪದಲ್ಲಿ ನೋಂದಣಿ ಪ್ರಕ್ರಿಯೆ ನಡೆಸಲಾಗುತ್ತಿತ್ತು. ಆದರೆ ಇದೀಗ ಡಿಜಿಟಲ್ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಗಿದ್ದು, ಎಲ್ಲಾ ಹಂತಗಳಲ್ಲೂ, ಎಲ್ಲಾ ವರ್ಗದ ಜನರಿಗೆ ಪಕ್ಷದ ಸದಸ್ಯತ್ವ ನೀಡುವ ಉದ್ದೇಶವನ್ನು ಪಕ್ಷ ಹೊಂದಿದೆ ಎಂದು ತಿಳಿಸಿದರು.

ಎಐಸಿಸಿ, ಕೆಪಿಸಿಸಿಯ ತೀರ್ಮಾನಗಳು, ರಾಷ್ಟ್ರೀಯ ವರಿಷ್ಠರ ತೀರ್ಮಾನಗಳ ಮಾಹಿತಿಯನ್ನು ಪಕ್ಷದ ಬೇರು ಮಟ್ಟದ ಕಾರ್ಯಕರ್ತರಿಗೂ ತಿಳಿಸಲು ಡಿಜಿಟಲ್ ಸದಸ್ಯತ್ವ ಅಭಿಯಾನ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಶಾಲಾ-ಕಾಲೇಜುಗಳಲ್ಲಿ ಸಮವಸ್ತ್ರ ನೀತಿ ಸಂಹಿತೆ ಜಾರಿಗೊಳಿಸುವ ಬಗ್ಗೆ ಪಕ್ಷದ ನಿಲುವೇನು? ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ (3ನೇ ಪುಟಕ್ಕೆ)

## ಕೊವಿನ್ ನೋಂದಣಿಗೆ ಆಧಾರ್ ಕಡ್ಡಾಯವಲ್ಲ

ನವದೆಹಲಿ, ಫೆ. 7 – ಕೊರೊನಾ ಲಸಿಕೆಗಾಗಿ ರೂಪಿಸಲಾಗಿರುವ ಕೊವಿನ್ ತಾಣದಲ್ಲಿ ನೋಂದಣಿ ಮಾಡಿಸಿಕೊಳ್ಳಲು ಆಧಾರ್ ಕಡ್ಡಾಯವಲ್ಲ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಸೂರ್ಯ ಕಾಂತ್ ಅವರನ್ನು ಒಳಗೊಂಡ ಪೀಠಕ್ಕೆ ಕೇಂದ್ರ ಆರೋಗ್ಯ ಸಚಿವಾಲಯ ಈ ಕುರಿತು ಮಾಹಿತಿ ನೀಡಿದೆ. ಪಾಸ್‌ಪೋರ್ಟ್, ಚಾಲನಾ ಅನುಮತಿ, (3ನೇ ಪುಟಕ್ಕೆ)


ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಸಹೋದರ
ಡಿ. ಬುಡ್ಡಪ್ಪ ನಿಧನ



ಜನನ : 12.01.1953
ಮರಣ : 7.02.2022

ದಾವಣಗೆರೆ ನಗರದ ವಾಸಿ ಕಾರ್ಪೊರೇಷನ್ ಬ್ಯಾಂಕ್ ನಿವೃತ್ತ ಸೀನಿಯರ್ ಮ್ಯಾನೇಜರ್
ಡಿ.ಬುಡ್ಡಪ್ಪ
ಅವರು, ಇಂದು ದಿನಾಂಕ 07.02.2022 ರ ಸೋಮವಾರ ಬೆಳಗ್ಗೆ 7 ಗಂಟೆಗೆ ನಿಧನರಾದರು. ಮೃತರಿಗೆ 69 ವರ್ಷ ವಯಸ್ಸಾಗಿತ್ತು. ಡಿ.ಬುಡ್ಡಪ್ಪ ಕೆಪಿಸಿಸಿ ವಕ್ತಾರರಾದ ಡಿ.ಬಸವರಾಜ್ ಅವರ ಹಿರಿಯ ಸಹೋದರರಾಗಿದ್ದಾರೆ. ಮೃತರು ಪತ್ನಿ ಎಂ.ಜಿ. ಗಂಗಮ್ಮ ಮತ್ತು ನ್ಯೂರೋ ಸರ್ಜನ್ ಡಾ. ಬಿ. ಸುನೀಲ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಸಹೋದರರು, ಮೂವರು ಸಹೋದರಿಯರು ಸೇರಿದಂತೆ, ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ನಗರದ ಎಂ.ಸಿ.ಸಿ ಎ ಬ್ಲಾಕ್ 1ನೇ ಕ್ರಾಸ್ 2ನೇ ಮುಖ್ಯ ರಸ್ತೆಯಲ್ಲಿರುವ ಸೂಪರ್ ಮಾರ್ಕೆಟ್ ಎದುರು ಚರ್ಚ್ ರಸ್ತೆಯಲ್ಲಿ ಇರುವ ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿದೆ. ನಂತರ ಅಂತ್ಯಕ್ರಿಯೆಯು ದಿನಾಂಕ 08.02.2022 ರ ಮಂಗಳವಾರ ಬೆಳಗ್ಗೆ 11 ಗಂಟೆಗೆ ಬೂದಾಳ್ ರಸ್ತೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.
ದುಃಖತಪ್ತ ಕುಟುಂಬ ವರ್ಗ
ಮೊ: 98440 63773, 91640 88232



ಶಾಮನೂರು ವಡೇರಹಳ್ಳಿ ಮಂಜಪ್ಪ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ
ಶ್ರೀ ವಡೇರಹಳ್ಳಿ ಮಂಜಪ್ಪ
ಅವರು ದಿನಾಂಕ 07.02.2022ರಂದು ಸೋಮವಾರ ಮಧ್ಯಾಹ್ನ 1.45ಕ್ಕೆ ನಿಧನರಾದರು. ಮೃತರಿಗೆ 66 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರಿ, ಅಳಿಯ, ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.02.2022ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.
ದುಃಖತಪ್ತ ಕುಟುಂಬ ವರ್ಗ
ಮೊ: 98445 70297, 98444 13218





**ಸೈಟುಗಳು ಮಾರಾಟಕ್ಕೆ (ಡಬಲ್ ರೋಡ್‌ಗೆ)**
ಕರ್ನಾಟಕ ಗೃಹ ಮಂಡಳಿಯಲ್ಲಿ 55x78 ಉತ್ತರ ಪೂರ್ವ ಕಾರ್ನರ್ 30x50 ಪೂರ್ವ, 40x60 ಉತ್ತರ. 60x80 ಪೂರ್ವ, 55x80 ವೆಸ್ಟ್ ಸೌತ್, 55x45 ವೆಸ್ಟ್ ಸೌತ್ ಕಾರ್ನರ್ ಡಬಲ್ ರೋಡ್‌ಗೆ
**ಕಿರಣ್ ಬೂಸ್ನೂರ್**
**98440 63409**

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
**ಫೋ. : 96062 82814**

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಲೇಔಟ್ ಪಕ್ಕ ಹೊಸ ಬನಶಂಕರಿ ಬಡಾವಣೆಯಲ್ಲಿ 30x50 ಕಾರ್ನರ್ ಪೂರ್ವ - ದಕ್ಷಿಣ. J.H. ಪಟೇಲ್ ಬಡಾವಣೆಯಲ್ಲಿ 20x30 ಉತ್ತರ
**ಸ್ವಾಮಿ ಏಜೆಂಟ್ (ವಿದ್ಯಾನಗರ)**
**97421 44715**

**ಬೇಕಾಗಿದ್ದಾರೆ**
1. ದಾವಣಗೆರೆಯಲ್ಲಿ ಮನೆ ಮತ್ತು ಹೊರಗಿನ ಕೆಲಸ ಮಾಡಲು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಹೊಂದಿರಬೇಕು)
2. ಹೊಲದಲ್ಲಿ ಇದ್ದುಕೊಂಡೇ ಕೆಲಸ ಮಾಡಲು ಓರ್ವರು ಆಳು ಬೇಕಾಗಿದ್ದಾರೆ.
**70185 88900**
**95388 70257**

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
**97315 12365**

**ಮನೆ ಲೀಸ್/ಬಾಡಿಗೆಗೆ**
ಲೋಕಿಕೆರೆ ಕೈಗಾರಿಕಾ ವಲಯ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಹತ್ತಿರವಿರುವ 2 BHK ಲಿಫ್ಟ್ ಕಾರ್ ಪಾರ್ಕಿಂಗ್, ನೀರಿನ ವ್ಯವಸ್ಥೆ, ಸುಸಜ್ಜಿತ 1 ಮನೆ ಲೀಸ್/ಬಾಡಿಗೆಗೆ ಇದೆ ವಿಚಾರಿಸಿ.
**99004 11110**
**99865 38099**

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್ ಹಾಗೂ 3 ವರ್ಷಗಳ ಅನುಭವವಿರುವ ಸೇಲ್ಸ್ ಮನ್ / ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ: **ಆಮಂತ್ರಣ**
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
**97400 01117**

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಯುನಿಕ್ ಸೆಕ್ಯೂರಿಟಿ ಸರ್ವೀಸ್, 1ನೇ ಮಹಡಿ, ಹೆಬ್ಬಾರ್ ಕಾಂಪ್ಲೆಕ್ಸ್, ಕೆಬಿ. ಬಡಾವಣೆ, ತ್ರಿಶೂಲ್, ಥಿಯೇಟರ್ ರಸ್ತೆ, ದಾವಣಗೆರೆ.
**ಫೋ .: 98803 37686**

**WANTED**
Computer Operater - 02
Office Boy - 01
**Winners Career Academy Davangere.**
**98869 97892, 91485 96892**

**ಅಕೌಂಟೆಂಟ್ ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಬಿ.ಕಾಂ ಆಗಿರುವ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ.
ಬಯೋಡೇಟಾದೊಂದಿಗೆ ಸಂಪರ್ಕಿಸಿ :
**ನವೋದಯ ಚಿಟ್ ಫಂಡ್ಸ್**
ನಂ. 34, ಮುರುಘ ರಾಜೇಂದ್ರ ಕಾಂಪ್ಲೆಕ್ಸ್, ನಿಟುವಳ್ಳಿ, ದಾವಣಗೆರೆ.
ಭೇಟಿ ಸಮಯ : ಬೆಳಿಗ್ಗೆ 11.30ರಿಂದ ರಾತ್ರಿ 8ರವರೆಗೆ.


## ಸಮವಸ್ತ್ರ ಕಡ್ಡಾಯ

(1ನೇ ಪುಟದಿಂದ) ನ್ಯಾಯಾಲಯದಲ್ಲೂ ಪ್ರಕರಣ ಬಂದಿದೆ. ನಾಳೆ ಈ ಬಗ್ಗೆ ನ್ಯಾಯಮೂರ್ತಿಗಳು ಯಾವ ತೀರ್ಮಾನ ಕೈಗೊಳ್ಳುತ್ತಾರೋ ಅದರ ಅನುಸಾರ ಸರ್ಕಾರ ನಡೆದುಕೊಳ್ಳುತ್ತದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಶಾಲಾ-ಕಾಲೇಜುಗಳಲ್ಲಿ ಯಾವ ರೀತಿಯ ವಸ್ತ್ರಸಂಹಿತೆ ಇರಬೇಕೆನ್ನುವುದು ಸಂವಿಧಾನ ಹೇಳಿದೆ. ಕರ್ನಾಟಕ ಶಿಕ್ಷಣ ಕಾಯ್ದೆಯ ನಿಯಮಗಳಲ್ಲಿ ಹಾಗೂ ಶಾಲಾ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ಸಹ ಸ್ಪಷ್ಟವಾಗಿ ಹೇಳಿದೆ. ಸರ್ಕಾರವೂ ಈಗಾಗಲೇ ಸುತ್ತೋಲೆ ಹೊರಡಿಸಿದೆ.

ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ಮುಖ್ಯ. ಪರೀಕ್ಷೆಯೂ ಹತ್ತಿರ ಬರುತ್ತಿರುವುದರಿಂದ ಸರ್ಕಾರದ ಸುತ್ತೋಲೆಯನ್ನು ಎಲ್ಲರೂ ಪರಿಪಾಲಿಸಬೇಕು. ಶಾಂತಿಯನ್ನೂ ಕಾಪಾಡಬೇಕು. ಯಾರೂ ಶಾಂತಿಯನ್ನು ಕದಡುವ ತೀರ್ಮಾನ ಮಾಡಬಾರದು. ಸುತ್ತೋಲೆಯನ್ನು ಪರಿಪಾಲಿಸಬೇಕು. ಇಂಥ ಪ್ರಕರಣಗಳು ಎಲ್ಲಾ ರಾಜ್ಯಗಳಲ್ಲಿ ನ್ಯಾಯಾಲಯದ ಮೆಟ್ಟಿಲು ಹತ್ತಿ ತೀರ್ಮಾನಗಳಾಗಿವೆ ಎಂದರು.

# ಎಲ್ಲಾ ಧರ್ಮ, ಭಾಷೆಗಳಿಂದಾಗಿ ಭಾರತ ಮಾದರಿ

## ಹಳ್ಳಿಹಾಳ್ : ಶ್ರೀ ಮುರುಡ ಬಸವೇಶ್ವರ ದೇಗುಲ ಲೋಕಾರ್ಪಣೆ ಸಮಾರಂಭದಲ್ಲಿ ಶಾಸಕ ಲಿಂಗೇಶ್ ಅಭಿಮತ



ಮಲೇಬೆನ್ನೂರು, ಫೆ.7- ಧರ್ಮ ಮತ್ತು ಅಧ್ಯಾತ್ಮ ಭಾರತದ ಜೀವಾಳವಾಗಿದ್ದು ಸಂಸ್ಕಾರ, ಸಂಸ್ಕೃತಿ, ಸೌಹಾರ್ದತೆ, ಸಹಬಾಳ್ವೆ ದೇಶದಲ್ಲಿ ಗಟ್ಟಿಯಾಗಿ ಉಳಿದಿದೆ ಎಂಬುದಕ್ಕೆ ಈ ಧಾರ್ಮಿಕ ಕಾರ್ಯಕ್ರಮ ಸಾಕ್ಷಿಯಾಗಿದೆ ಎಂದು ಹಾಸನ ಜಿಲ್ಲೆ ಬೇಲೂರು ಕ್ಷೇತ್ರದ ಶಾಸಕ ಲಿಂಗೇಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ಅವರು ಸೋಮವಾರ ಹಳ್ಳಿಹಾಳ್ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಗ್ರಾಮದ ಆರಾಧ್ಯ ದೈವ ಶ್ರೀ ಮುರುಡ ಬಸವೇಶ್ವರ ಸ್ವಾಮಿಯ ದೇವಸ್ಥಾನ ಲೋಕಾರ್ಪಣೆ ಮತ್ತು ದೇವರಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಕಾರ್ಯಕ್ರಮಗಳ ಅಂಗವಾಗಿ ಹಮ್ಮಿಕೊಂಡಿದ್ದ ಧಾರ್ಮಿಕ ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು.

ನೊಳಂಬರಾದ ನಾವು ರಾಜಮನೆತನಕ್ಕೆ ಸೇರಿದವರು, 8 ರಿಂದ 11ನೇ ಶತಮಾನದವರೆಗೆ ತುಮಕೂರು ಮತ್ತು ಆಂಧ್ರಪ್ರದೇಶ, ತಮಿಳು ನಾಡಿನ ಕೆಲವು ಭಾಗಗಳಲ್ಲಿ ನೊಳಂಬರು ಆಳ್ವಿಕೆ ನಡೆಸಿದ್ದು, ರಾಷ್ಟ್ರಕೂಟರು, ಚಾಲುಕ್ಯರು, ಗಂಗರ ಸರಿಸಮಾನವಾಗಿ ಆಳ್ವಿಕೆ ನಡೆಸಿದ್ದೇವೆ. ಪಲ್ಲವರು ಮತ್ತು ನೊಳಂಬರು ಒಂದೇ ಆಗಿದ್ದು, ನಮ್ಮ ರಾಜ್ಯ ಲಾಂಛನ ನಂದಿ ಮತ್ತು ಶ್ರೀ ಗುರು ಸಿದ್ದರಾಮೇಶ್ವರರು ನಮ್ಮ ಗುರುಗಳಾಗಿದ್ದಾರೆ ಎಂದು ಶಾಸಕ ಲಿಂಗೇಶ್ ಹೇಳಿದರು.

ಶಾಸಕ ಎಸ್.ರಾಮಪ್ಪ ಮಾತನಾಡಿ, ಶಾಸಕ ಲಿಂಗೇಶ್ ಅವರ ಅಭಿಪ್ರಾಯಗಳಿಗೆ ಬೆಂಬಲ ವ್ಯಕ್ತಪಡಿಸಿ, ಅಂಬೇಡ್ಕರ್ ಅವರ ಸಂವಿಧಾನದಿಂದಾಗಿ ದೇಶದಲ್ಲಿ ಶಾಂತಿ, ಸಾಮರಸ್ಯ ಮತ್ತು ಅಧ್ಯಾತ್ಮ ನೆಲೆಸಿದೆ.

ಅಭಿವೃದ್ಧಿ ವಿಷಯದಲ್ಲಿ ನಾನು ಜಾತಿ, ಪಕ್ಷ ಮಾಡಿಲ್ಲ. ಕೆಲಸ ಮತ್ತು ಅನುದಾನ ಕೇಳಿದ ವರಿಗೆ ಕೈಲಾದಷ್ಟು ಸ್ಪಂದಿಸಿದ್ದೇನೆ. ಕೋವಿಡ್ ಕಾರಣ ಹೇಳಿ ಸರ್ಕಾರ ಅನುದಾನ ನೀಡುತ್ತಿಲ್ಲ. ಆದರೂ ಈ ದೇವಸ್ಥಾನಕ್ಕೆ ಅಗತ್ಯವಿರುವ 10 ಲಕ್ಷ ರೂ.ಗಳನ್ನು ಶಾಸಕ ಅನುದಾನದಲ್ಲಿ ನೀಡುತ್ತೇನೆಂದು ರಾಮಪ್ಪ ಹೇಳಿದರು.

ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಮಾತನಾಡಿ, ಧರ್ಮ ಆಚರಣೆಯಿಂದ ಉಳಿಯುತ್ತಿದೆಯೋ ಹೊರತು, ಭಾಷಣದಿಂದಲ್ಲ. ಈ ದೇವಸ್ಥಾನ ಭಕ್ತರ ಬೆವರಿನ ಶ್ರಮದ ಪ್ರತಿಫಲವಾಗಿದೆ. ನಾನು ಶಾಸಕನಾಗಿದ್ದಾಗ ಅನುದಾನ ನೀಡಿದ್ದೇನೆ. ದೇವಸ್ಥಾನಗಳು ಹಳ್ಳಿಗಳಲ್ಲಿ ಶಾಂತಿ, ಸಾಮರಸ್ಯ ಮೂಡಿಸಲು ಸಹಕಾರಿಯಾಗಬೇಕು. ಹಣದಿಂದ ಏನೂ ಸಾಧ್ಯವಿಲ್ಲ. ಗುಣದಿಂದ ಎಲ್ಲವೂ ಸಾಧ್ಯ ಎಂಬುದನ್ನು ಹಳ್ಳಿಹಾಳ್ ಗ್ರಾಮಸ್ಥರು ತೋರಿಸಿಕೊಟ್ಟಿದ್ದಾರೆ ಎಂದರು.

ಆವರಗೊಳ್ಳ ಶ್ರೀ ಕ್ಷೇತ್ರದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಯಲವಟ್ಟಿ ಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಿದ್ದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು. ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿದರು.

ಶ್ರೀ ಮುರುಡ ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಹೆಚ್.ಈರನಗೌಡ ಅಧ್ಯಕ್ಷತೆ ವಹಿಸಿದ್ದರು.

ಈ ವೇಳೆ ದೇವಸ್ಥಾನಕ್ಕೆ ನೆರವು ನೀಡಿದ ವ್ಯಕ್ತಿಗಳನ್ನು ಹಾಗೂ ದೇವಸ್ಥಾನ ಶಿಲ್ಪಿ ರಾಮಾಂಜನಪ್ಪ ಗೋಪುರ ಶಿಲ್ಪಿ ಗಣೇಶ್, ತರಗಾರ ಹೊನ್ನಪ್ಪ ಅವರನ್ನು ಸನ್ಮಾನಿಸಲಾಯಿತು.

ಮಾಜಿ ಶಾಸಕ ಬಿ.ಪಿ.ಹರೀಶ್, ನಂದಿ ಸೌಹಾರ್ದ ಸಹಕಾರಿ ಅಧ್ಯಕ್ಷ ಜಿಗಳಿ ಇಂದೂಧರ್, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಜಿ.ಪಂ. ಮಾಜಿ ಸದಸ್ಯ ಎಂ.ನಾಗೇಂದ್ರಪ್ಪ, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ತಾ. ಜೆಡಿಎಸ್ ಅಧ್ಯಕ್ಷ ಹೆಚ್.ಟಿ.ಪರಮೇಶ್ವರಪ್ಪ, ತಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ವಾಸನದ ಬಸವರಾಜಪ್ಪ, ಹಿಂಡಸಘಟ್ಟ ಮುರುಗೇಶ್, ಭದ್ರಾ ನೀರು ಬಳಕೆದಾರರ ಮಹಾಮಂಡಳದ ಅಧ್ಯಕ್ಷ ವೈ.ದ್ಯಾವಪ್ಪ ರೆಡ್ಡಿ, ವಕೀಲ ನಂದಿತಾವರೆ ತಿಮ್ಮನಗೌಡ, ಗ್ರಾ.ಪಂ. ಸದಸ್ಯರಾದ ಹಲ್ಮನಿ ಬಸವನಗೌಡ, ಸುಮ ಬಸವನಗೌಡ, ಗೌರಮ್ಮ ಧರ್ಮರಾಜ್, ಈರಮ್ಮ ಚಂದ್ರಶೇಖರ್ ಮತ್ತು ಯು.ಎನ್. ಶಿವನಗೌಡ ಮತ್ತಿತರರು ಭಾಗವಹಿಸಿದ್ದರು.

ಗ್ರಾಮದ ಹೆಚ್.ಎಸ್.ಮಲ್ಲನಗೌಡ ಸ್ವಾಗತಿಸಿದರು. ಬಿ.ಎನ್.ಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ ಶೀಲಾ ನಿರೂಪಿಸಿದರು. ಗ್ರಾಮದ ಹೆಚ್.ವೀರನಗೌಡ ವಂದಿಸಿದರು.


**ಸೈಟುಗಳು ಮಾರಾಟಕ್ಕಿವೆ**
ಜಯನಗರ ಹತ್ತಿರ 40x60 ಉತ್ತರ. ಲಕ್ಷ್ಮಿ ಲೇಔಟ್ 40x60 ಉತ್ತರ. ಶಿವಕುಮಾರಸ್ವಾಮಿ ಬಡಾವಣೆ 40x60 ಸೈಟು ಪಶ್ಚಿಮ
**97418 11694**

**ಬೇಕಾಗಿದ್ದಾರೆ**
ಬಸವೇಶ್ವರ ಕೆಟರಿಂಗ್ ಅಡುಗೆ ಸಹಾಯಕರು ಮತ್ತು ಕ್ಲೀನರ್ (ಮಹಿಳೆಯರಿಗೆ ಮಾತ್ರ) ಬೇಕಾಗಿದ್ದಾರೆ. ಊಟ, ವಸತಿ ಮತ್ತು ಪಿಎಫ್ ಸೌಲಭ್ಯವಿರುತ್ತದೆ.
**ಫೋ. : 87924 00431**

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ಹುಡುಗಿಯರು ಅನುಭವವಿರುವ/ಇಲ್ಲದವರು ಕೂಡಲೇ ಸಂಪರ್ಕಿಸಿ.
**ಡಿಗ್‌ಜಾಮ್ ಲೇಡಿಸ್‌ವೇರ್**
ವಿಜಯಲಕ್ಷ್ಮಿ ರಸ್ತೆ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ. ಮೊ: 89518 96908

**Dog Bording & Oldage**
ನೀವು ವಿದೇಶಕ್ಕೆ ಹೋಗಲಿದ್ದೀರಾ, ಆರೋಗ್ಯ ಸರಿ ಇಲ್ವಾ, ಮನೆಯಲ್ಲಿ ಸಮಾರಂಭ ಇದೆಯಾ, ಮನೆಯಲ್ಲಿ ಚಿಕ್ಕ ಮಕ್ಕಳಿದ್ದಾರಾ, ನಿಮ್ಮ ಪ್ರೀತಿಯ ನಾಯಿಯನ್ನು ನೋಡಿಕೊಳ್ಳಲು ಆಗುತ್ತಿಲ್ಲವೇ, ಆಗದರೆ ನಮ್ಮ ಬಳಿ ಬಿಡಿ ಆಹಾರ , ಆರೋಗ್ಯ, ವಸತಿ ಇರುತ್ತದೆ. ಉತ್ತಮ್ ಲೇಔಟ್ ಹಿಂಭಾಗ, ಎಸ್.ಪಿ. ಬಡಾವಣೆ, ಪಿ.ಬಿ.ರಸ್ತೆ, ದಾವಣಗೆರೆ.
**98444 92134**

**ಸೈಟುಗಳು ಮಾರಾಟಕ್ಕಿವೆ**
ಎಂ.ಸಿ.ಸಿ. 'ಎ' ಬ್ಲಾಕ್ 22x60 ಪೂರ್ವ, 44x60 ಪೂರ್ವ, ಎಂ.ಸಿ.ಸಿ. 'ಎ' ಬ್ಲಾಕ್, ಮಹಾಲಕ್ಷ್ಮಿ ಬಡಾವಣೆ 30x40 ಉತ್ತರ, ಕುಂದುವಾಡ ಮುಖ್ಯರಸ್ತೆಗೆ 50x60 ದಕ್ಷಿಣ, ತರಳಬಾಳು ಬಡಾವಣೆ 40x60 ದಕ್ಷಿಣ. ಹೊಸ ಮನೆಗಳು ಮಾರಾಟಕ್ಕಿವೆ.
**97418 11694**

**ಬೇಕಾಗಿದೆ**
Old Used Shed Material For Industry 5000 - 10000 sqft
Contact
**94486 58255**

**ಮನೆ ಬಾಡಿಗೆಗೆ ಬೇಕಾಗಿದೆ**
2 BHK, 3 BHKಯ ಹೊಸ ಮನೆ ಬಾಡಿಗೆಗೆ ಬೇಕಾಗಿದೆ.
**90196 95451**

**ಭೂಮಿಕಾ ಮ್ಯಾಟ್ರಿಮೊನಿ**
**ಲಿಂಗಾಯಿತ ವಧು-ವರರ ಕೇಂದ್ರ**
Near Coffee day, Nutana College Road, Vidyanagara, 2nd Main, Davangere
**77603 16576**
**90080 55813**

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕಿನಲ್ಲಿ ಅಡಿಕೆ ತೋಟದಲ್ಲಿ ಕೆಲಸ ಮಾಡಲು ಒಂದು ಕುಟುಂಬದವರು ಬೇಕಾಗಿದ್ದಾರೆ. ಸಂಪರ್ಕಿಸಿ :
**ಫೋ .: 94484 39639**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**WANTED**
Delivery Boys - 3 No's
Salesman - 3 No's
Contact
**BALAJI MEDICALS**
P.B. Road, Near old Bustand, Davanagere
**98803 66119**


# ಸರ್ಕಾರಿ ಆಸ್ಪತ್ರೆಯಲ್ಲಿ ಕ್ಷಯ ರೋಗ ಪತ್ತೆ ಯಂತ್ರ ಉದ್ಘಾಟನೆ

**ರಾಣೇಬೆನ್ನೂರು**



ರಾಣೇಬೆನ್ನೂರು, ಫೆ. 7- ಕ್ಷಯರೋಗ ಪತ್ತೆ ಮಾಡುವ ನಿಟ್ಟಿನಲ್ಲಿ ಸರ್ಕಾರ ಅತ್ಯಾಧುನಿಕ ಯಂತ್ರವನ್ನು ತಾಲ್ಲೂಕಿಗೆ ಕೊಡುಗೆ ನೀಡಿದೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ನಗರದ ಹಲಗೇರಿ ರಸ್ತೆಯಲ್ಲಿರುವ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಕ್ಷಯರೋಗ ವಿಭಾಗದಲ್ಲಿ ಶನಿವಾರ ಕ್ಷಯರೋಗ ಪತ್ತೆ ಮಾಡುವ ಯಂತ್ರವನ್ನು (ಸಿಬಿನ್ಯಾಟ್) ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಕ್ಷಯರೋಗವನ್ನು 2025ಕ್ಕೆ ನಿರ್ಮೂಲನೆ ಮಾಡುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ. ಹೀಗಾಗಿ ಕ್ಷಯರೋಗವನ್ನು ಬಹುಬೇಗ ಪತ್ತೆ ಮಾಡುವ ಹಿನ್ನೆಲೆಯಲ್ಲಿ ಈ ಯಂತ್ರವನ್ನು ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಗೆ ಪೂರೈಕೆ ಮಾಡಿದೆ. ಇದರ ಸೌಲಭ್ಯವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕು ಎಂದರು.

ನಗರದ ಕ್ಷಯರೋಗ ಆರೋಗ್ಯ ಸಂದರ್ಶಕ ಗಿರೀಶ್ ಮುರನಾಳ ಮಾತನಾಡಿ, ಕ್ಷಯರೋಗ ಪತ್ತೆ ಹಚ್ಚಲು ಡಿಎನ್‌ಎ ಹಾಗೂ ಆರ್‌ಎನ್‌ಎ ಸಿಬಿನ್ಯಾಟ್ (ಕಾಟ್ರೇಜ್ ಬೇಸ್ಡ್ ನ್ಯೂಕ್ಲಿಕ್ ಅಪ್ಲಿಕೇಷನ್ ಟೆಸ್ಟ್) ಮುಖಾಂತರ ಪಿಸಿಆರ್‌ನಲ್ಲಿ (ಪಾಲಿಮರ್ ಚೈನ್ ರಿಯಾಕ್ಷನ್) ಕ್ಷಯರೋಗದ ಮೊದಲ ಹಂತ ಹಾಗೂ ಎರಡನೆಯ ಹಂತ ಎಂಡಿಆರ್ (ಮಲ್ಟಿ ಡ್ರಗ್ ರೆಸಿಸ್ಟೆನ್ಸ್) ಪತ್ತೆ ಹಚ್ಚಿ ರೋಗಿಗೆ ಅತಿ ಶೀಘ್ರದಲ್ಲಿಯೇ ಚಿಕಿತ್ಸೆ ನೀಡಲು ಈ ಯಂತ್ರ ಸಹಕಾರಿಯಾಗಿದೆ ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಸಂತೋಷ್‌ಕುಮಾರ್, ಸಾರ್ವಜನಿಕ ಆಡಳಿತಾಧಿಕಾರಿ ಡಾ.ಪರಮೇಶ್ವರಪ್ಪ ಮಾತನಾಡಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಜಿಪಂ ಮಾಜಿ ಅಧ್ಯಕ್ಷ ಮಂಜುನಾಥ ಓಲೇಕಾರ, ಡಾ. ರಾಜು ಶಿರೂರ, ಹಿರಿಯ ಕ್ಷಯರೋಗ ಪ್ರಯೋಗ ಶಾಲಾ ಮೇಲ್ವಿಚಾರಕ ಹಸನ್‌ಸಾಬ್ ಹುಬ್ಬಳ್ಳಿ, ಆರೋಗ್ಯ ಇಲಾಖೆಯ ಇತರೆ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.


**ತುರ್ತಾಗಿ ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ರೂಂ ಬಾಯ್ ಕೆಲಸಕ್ಕೆ ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ಆಕರ್ಷಕ ವೇತನದೊಂದಿಗೆ ಊಟ ಮತ್ತು ವಸತಿ ನೀಡಲಾಗುವುದು.
**81528 82277, 97428 29451**

**RENT / LEASE**
2 BHK House with lift facility available at SANGAM Apartment, Mahalakshmi layout, near to Kunduwada kere, GMIT and D.C. Office
**96388 17967, 73380 43912**

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
**95133 14666**
(ಹೋಂ ಡೆಲಿವರಿ ಮಾತ್ರ)

**TO LET**
ಶೋ ರೂಂ ಅಥವಾ ಬಾರ್ & ರೆಸ್ಟೋರೆಂಟ್ ಮಾಡಲು ಸೂಕ್ತವಾದ ಕಟ್ಟಡ ಬಾಡಿಗೆಗೆ ಇದೆ. ಶಿವಗಂಗೆ ಕನ್ವೆನ್ಷನ್ ಹಾಲ್ ಎದುರು, ಹಳೇ ಕುಂದವಾಡ ರಸ್ತೆ, ದಾವಣಗೆರೆ.
**80507 02728**

**ಬೋರ್‌ವೆಲ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ 1000 ಅಡಿವರೆಗೆ.
ಸಂಪರ್ಕಿಸಿ: **ಬಸವರಾಜಪ್ಪ ಎಂ.ಟಿ.**
ಜಲಸಂಶೋಧಕರು
**94492 02888**

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
**ಮೊ. 9538777582**
ಕೆಲಸ 100% ಗ್ಯಾರಂಟಿ.

**Tuitions For**
1st /SSLC/ PCMB/ Comm / Arts/
100 % Results With solved notes.
**Sinchana Academy**
Near Ram & Co Cricle, Davangere
**90195 80600, 85532 78258.**

**ಮನೆ ಬಾಡಿಗೆಗೆ**
1ನೇ ಫ್ಲೋರ್‌ನಲ್ಲಿ, 3 ಬೆಡ್ ರೂಂ ಹಾಗೂ 2 ಬೆಡ್ ರೂಂ, ಹೊಸ ಮನೆ, ವಿಳಾಸ : ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸ್, ಡೋ. ನಂ. 1663/1-2, ಕಲ್ಪವೃಕ್ಷ, ದಾವಣಗೆರೆ.
**ಸಂಪರ್ಕಿಸಿರಿ : 70198 78789**
(Pets Not Allowed)

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**91132 85992**


# ನದಿ ಜೋಡಣೆಯಲ್ಲಿ ರಾಜ್ಯಕ್ಕೆ ಸಮರ್ಪಕ ಪಾಲು ಬೇಕು

(1ನೇ ಪುಟದಿಂದ) ಇಡಲು ಸಾಧ್ಯವಿಲ್ಲ. ಬದಲಿಗೆ ನದಿ ಪಾತ್ರದಲ್ಲಿ ಎಷ್ಟು ನೀರು ಲಭ್ಯವಿದೆ. ಅದರಲ್ಲಿ ರಾಜ್ಯದ ಪಾಲು ಎಷ್ಟು ಮತ್ತು ರಾಜ್ಯದ ಅಗತ್ಯವೇನು ಎನ್ನುವುದು ಮೊದಲು ಸ್ಪಷ್ಟವಾಗಬೇಕು ಎಂದೂ ಅವರು ಹೇಳಿದ್ದಾರೆ.

ನದಿ ಜೋಡಣೆಯ ವಿಷಯದಲ್ಲಿ ಮೊದಲು ಮೂರು ವಿಷಯಗಳು ಸ್ಪಷ್ಟವಾಗಬೇಕು, ಆ ಮೂಲಕ ನಮ್ಮ ಹಿತ ರಕ್ಷಣೆಯಾಗಲಿದೆಯೇ ಎಂಬುದನ್ನು ನೋಡಬೇಕು.ಈ ವಿಷಯದಲ್ಲಿ ಯಾವ ರಾಜಿಯ ಪ್ರಶ್ನೆಯೇ ಇಲ್ಲ ಎಂದು ಅವರು ವಿವರಿಸಿದರು.

ಕರ್ನಾಟಕ್ಕೆ ನ್ಯಾಯಸಮ್ಮತವಾದ ಪಾಲನ್ನು ಪಡೆದುಕೊಳ್ಳಲು ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಜೀವನದಿಗಳಾಗಿರುವ ಕೃಷ್ಣ ಮತ್ತು ಕಾವೇರಿ ಜಲಾನಯನ ಪ್ರದೇಶಗಳ ಪ್ರಶ್ನೆಯಾಗಿರುವುದರಿಂದ ಈ ಬಗ್ಗೆ ನಮ್ಮ ನಿಲುವನ್ನು ಸ್ಪಷ್ಟಪಡಿಸಲಾಗಿದೆ. ಈ ಬಗ್ಗೆ ಯಾವುದೇ ರಾಜೀ ಇಲ್ಲ. ಕೇಂದ್ರ ಬಜೆಟ್ ಆಧರಿಸಿ ರಾಜ್ಯ ಬಜೆಟ್ಟನ್ನು ಪೂರಕವಾಗಿ ನಾವೆಷ್ಟು ಅಂದಾಜುಗಳನ್ನು ಮಾಡಬೇಕು ಎನ್ನುವ ಬಗ್ಗೆ ಕೇಂದ್ರ ಹಣಕಾಸು ಸಚಿವರ ಜೊತೆ ಚರ್ಚೆ ಮಾಡುತ್ತೇನೆ ಎಂದವರು ಹೇಳಿದ್ದಾರೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಇಂಧನ ಸಚಿವರು, ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್ ಅವರನ್ನು ಭೇಟಿಯಾಗಲಿರುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

ನಾಳೆಯೂ ದೆಹಲಿಯಲ್ಲಿಯೇ ಇರುತ್ತೇನೆ. ಜೆ.ಪಿ. ನಡ್ಡಾ ಹಾಗೂ ಅಮಿತ್ ಷಾ ಅವರನ್ನೂ ಭೇಟಿಯಾಗುವ ಸಾಧ್ಯತೆಗಳಿವೆ. ಕೇಂದ್ರದ ನಾಯಕರು ಸಮಯ ನೀಡಿದಾಗ ಸಂಪುಟ ರಚನೆಗೆ ಸಂಬಂಧಿಸಿದ ವಿಷಯಗಳು ಚರ್ಚೆಗೆ ಬರಲಿವೆ ಎಂದರು.

## ರಸ್ತೆ ಅಪಘಾತದಲ್ಲಿ ಕಾರ್ಮಿಕನ ಸಾವು

ದಾವಣಗೆರೆ, ಫೆ.7- ಬೈಕ್ ಮತ್ತು ಗೂಡ್ಸ್ ವಾಹನ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಯುವ ಕೂಲಿ ಕಾರ್ಮಿಕನೋರ್ವ ಸಾವನ್ನಪ್ಪಿರುವ ಘಟನೆ ನಗರದ ಜಿಲ್ಲಾ ಕ್ರೀಡಾಂಗಣ ಬಳಿ ಇಂದು ಮಧ್ಯಾಹ್ನ ನಡೆದಿದೆ.

ಲೆನಿನ್ ನಗರದ ರಾಜೇಶ್ವರಿ ಬಡಾವಣೆ 2ನೇ ಕ್ರಾಸ್ ನ ದುಗ್ಗಪ್ಪ ಎಂಬುವರ ಮಗ ಮಂಜುನಾಥ್ (24) ಮೃತ ದುರ್ದೈವಿ. ಮೃತನು ಕೆಲಸ ಮುಗಿಸಿಕೊಂಡು ಬೈಕನ್ನು ಕ್ರೀಡಾಂಗಣ ಎದುರಿನ ಕೆಟಿಜೆ ನಗರ ರಸ್ತೆ ಮಾರ್ಗದ ಕಡೆಗೆ ತಿರುಗಿಸುತ್ತಿರುವಾಗ ಅದೇ ಸಮಯಕ್ಕೆ ವಿದ್ಯಾರ್ಥಿ ಭವನದ ಕಡೆಯಿಂದ ಬಂದ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ಮಂಜುನಾಥ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಹೇಳಲಾಗಿದೆ.

## ಹರಿಹರದಲ್ಲಿ ಇಂದು ಲತಾ ಮಂಗೇಶ್ಕರ್, ಇಬ್ರಾಹಿಂ ಸುತಾರರಿಗೆ ಶ್ರದ್ಧಾಂಜಲಿ ಸಭೆ

ಇತ್ತೀಚೆಗೆ ನಿಧನರಾದ ಭಾರತರತ್ನ ಲತಾ ಮಂಗೇಶ್ಕರ್ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಇಬ್ರಾಹಿಂ ಸುತಾರಾ ಅವರಿಗೆ ಶ್ರದ್ಧಾಂಜಲಿ ಸಭೆ ಇಂದು ಸಂಜೆ 5 ಗಂಟೆಗೆ ಹರಿಹರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹರಿಹರ ಕಾಳಿದಾಸ ನಗರದ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಕಸಾಪ ಆಜೀವ ಸದಸ್ಯರು, ಸಾರ್ವಜನಿಕರು ಕಾರ್ಯಕ್ರಮಕ್ಕೆ ಆಗಮಿಸಲು ಕನ್ನಡ ಸಾಹಿತ್ಯ ಪರಿಷತ್‌ನ ನಿಯೋಜಿತ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ಕೋರಿದ್ದಾರೆ.

## ಶಿಡಕಪ್ಪರ ಶಾಂತಕುಮಾರ್ ನಿಧನ




ದಾವಣಗೆರೆ ತಾಲ್ಲೂಕು ತುರ್ಚಘಟ್ಟ ಗ್ರಾಮದ ವಾಸಿ ಶಿಡಕಪ್ಪರ ಶ್ರೀಮತಿ ಸುಂದರಮ್ಮ ದಿ. ಬಸವರಾಜಪ್ಪನವರ ಪುತ್ರ

**ಶಿಡಕಪ್ಪರ ಶಾಂತಕುಮಾರ್**

ಅವರು, ದಿನಾಂಕ: 7.2.2022 ರ ಸೋಮವಾರ ಸಂಜೆ 8-30 ಗಂಟೆಗೆ ಹೃದಯಾಘಾತದಿಂದ ನಿಧನರಾದರು. ಮೃತರಿಗೆ 57 ವರ್ಷ ವಯಸ್ಸಾಗಿತ್ತು. ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸಹೋದರ- ಸಹೋದರಿಯರನ್ನು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 8-2-2022 ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ತುರ್ಚಘಟ್ಟದ ಸ್ವಂತ ಜಮೀನಿನಲ್ಲಿ ನಡೆಯಲಿದೆ.

**ದುಃಖತಪ್ತ ಕುಟುಂಬ ವರ್ಗ**

## ಮೂಲಾ ರಮೇಶ್ ಬಾಬು ನಿಧನ



ದಾವಣಗೆರೆ ಶಾಮನೂರು ರಸ್ತೆ, ಸಿದ್ದವೀರಪ್ಪ ಬಡಾವಣೆ 12ನೇ ಕ್ರಾಸ್ ವಾಸಿ ಮೂಲಾ ರಮೇಶ್ ಬಾಬು (80) ಅವರು ದಿನಾಂಕ 07.2.2022ರ ಸೋಮವಾರ ಮಧ್ಯಾಹ್ನ 12.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 08.2.2022ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಸ್ಥಿರ ಸೊತ್ತು ನಿವೇಶನವನ್ನು ನನ್ನ ಕಕ್ಷಿಗಾರರು ಸ್ವತ್ತಿನ ಮಾಲೀಕರಾದ **ಡಾ. ಕನಿಷ್ಕಾ ಎಸ್. ಪಾಟೀಲ್ ಬಿನ್ ಶ್ರೀ ಸುನೀಲ್ ಎ. ಪಾಟೀಲ್, ಶಾಂತಿಧಾಮ ಅಮೃತ ಟಾಕೀಸ್ ಹತ್ತಿರ, ಹುಬ್ಬಳ್ಳಿ ನಗರ** ಇವರಿಂದ ಖರೀದಿಸಲು ಇಚ್ಛಿಸಿರುತ್ತಾರೆ.

ಸದರಿ ಷೆಡ್ಯೂಲ್ ಸೊತ್ತನ್ನು ನನ್ನ ಕಕ್ಷಿಗಾರರು ಮೇಲ್ಕಂಡ **ಡಾ. ಕನಿಷ್ಕಾ ಎಸ್. ಪಾಟೀಲ್ ಬಿನ್ ಶ್ರೀ ಸುನೀಲ್ ಎ. ಪಾಟೀಲ್, ಹುಬ್ಬಳ್ಳಿ ನಗರ** ಇವರಿಂದ ಖರೀದಿಸುವ ಬಗ್ಗೆ ಯಾರದಾದರೂ ಯಾವುದೇ ರೀತಿಯ ತಂಟೆ ತಕಾರರು, ವ್ಯಾಜ್ಯ ಅಥವಾ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ 15 ದಿವಸಗಳ ಒಳಗಾಗಿ ಈ ಕೆಳಕಂಡವರಿಗೆ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು, ಸದರಿ 15 ದಿವಸಗಳ ಅವಧಿ ಮೀರಿ ಬರುವ ಯಾವುದೇ ತಂಟೆ, ತಕಾರರು, ವ್ಯಾಜ್ಯ ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸದರಿ 15 ದಿವಸಗಳ ಅವಧಿ ನಂತರ ನನ್ನ ಕಕ್ಷಿಗಾರರು ಮೇಲ್ಕಂಡ **ಡಾ. ಕನಿಷ್ಕಾ ಎಸ್. ಪಾಟೀಲ್ ಬಿನ್ ಶ್ರೀ ಸುನೀಲ್ ಎ. ಪಾಟೀಲ್ ಹುಬ್ಬಳ್ಳಿ ನಗರ** ಇವರಿಂದ ಷೆಡ್ಯೂಲ್ ನಿವೇಶನವನ್ನು ರಿಜಿಸ್ಟರ್ಡ್ ಕ್ರಯ ಪತ್ರ ಮಾಡಿಸಿಕೊಳ್ಳುವುದರ ಮೂಲಕ ಸೊತ್ತಿನ ಸ್ವಾಧೀನ ಹೊಂದುವರು.

ಸದರಿ ಅವಧಿ ಮೀರಿ ಬರಬಹುದಾದ ಯಾವುದೇ ತಂಟೆ, ತಕಾರರು, ವ್ಯಾಜ್ಯ ಆಕ್ಷೇಪಣೆ ವಗೈರೆಗಳು ನನ್ನ ಕಕ್ಷಿಗಾರರನ್ನು ಪ್ರತಿಬಂಧಿಸುವುದಿಲ್ಲ ಹಾಗು ನನ್ನ ಕಕ್ಷಿಗಾರರು ಸದರಿ **ಡಾ. ಕನಿಷ್ಕಾ ಎಸ್. ಪಾಟೀಲ್ ಬಿನ್ ಶ್ರೀ ಸುನೀಲ್ ಎ. ಪಾಟೀಲ್, ಹುಬ್ಬಳ್ಳಿ ನಗರ** ಇವರಿಂದ ಪಡೆದುಕೊಳ್ಳುವ ಶುದ್ಧ ಕ್ರಯಪತ್ರವನ್ನು ಎಳ್ಳಷ್ಟೂ ಬಾಧಿಸುವುದಿಲ್ಲ ತಿಳಿಯುವುದು.

**ಷೆಡ್ಯೂಲ್**

ದಾವಣಗೆರೆ ಸಬ್ ರಿಜಿಸ್ಟ್ರಾರ್‌ವರ ಆಫೀಸ್‌ನ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿದ, ದಾವಣಗೆರೆ ತಾಲ್ಲೂಕು, ಶ್ಯಾಬನೂರು ಗ್ರಾಮದ ರಿ.ಸರ್ವೆ **ನಂ. 107/12,** ವಿಸ್ತೀರ್ಣ ಎಕರೆ-1, ಗುಂಟೆ 12 ವುಳ್ಳ ಜಮೀನು ಈ ಹಿಂದೆ ತಾ. 9.05.1970ರಲ್ಲಿ ವಾಸೋಪಯೋಗಕ್ಕಾಗಿ ಮನೆಗಳನ್ನು ಕಟ್ಟತಕ್ಕ ಬಗ್ಗೆ **ಕೆ. ಮಲ್ಲಪ್ಪ ಬಿನ್ ಮಲ್ಲಪ್ಪ** ಇವರ ಹೆಸರಿನಲ್ಲಿ ಚಿತ್ರದುರ್ಗ ಜಿಲ್ಲಾಧಿಕಾರಿಗಳಿಂದ **ಆರ್ಡರ್ ನಂ. ಬಿಡಿಐಎಸ್ ಎಎಲ್‌ಎನ್/ಎಸ್‌ಆರ್/103/70-71,**ರ ಪ್ರಕಾರ ಭೂ ಪರಿವರ್ತನೆ (ಅಲಿನೇಷನ್) ಆಗಿ ಸದರಿ ಆಲಿನೇಷನ್ ಆದ ಪ್ರದೇಶದಲ್ಲಿ ವಿಂಗಡಿಸಿದ ನಿವೇಶನಗಳ ಬಗ್ಗೆ ತಯಾರು ಮಾಡಿದ ಲೇಔಟ್ ಪ್ಲಾನನ್ನು ದಾವಣಗೆರೆ ಯೋಜನಾ ಪ್ರಾಧಿಕಾರದಿಂದ ಮಂಜೂರಾತಿ ಪಡೆದು, ಸದರಿ ಪ್ಲಾನ್‌ನಲ್ಲಿ ಕಂಡ ನಿವೇಶನಗಳಿಗೆ ಈ ಹಿಂದೆ ದಾವಣಗೆರೆ ನಗರಭೆಯಿಂದ ಡೋರ್ ನಂಬರ್ ಸಹ ದಾಖಲು ಮಾಡಿಸಿರುವ ಹಾಲಿ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ ದಾವಣಗೆರೆ ಸಿಟಿ, ಆಂಜನೇಯ ಬಡಾವಣೆಯಲ್ಲಿ ಬರತಕ್ಕ ಸೈಟುಗಳ ಪೈಕಿ ಸೈಟ್ ನಂ.5, ಇದರ ದಾವಣಗೆರೆ ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂಬರ್ 3683/17ಎ5, ಅಳತೆ ಪೂರ್ವ-ಪಶ್ಚಿಮ 40 ಅಡಿ ಉತ್ತರ -ದಕ್ಷಿಣ 60 ಅಡಿ (40x60 ಅಡಿ= 2400 ಚದರಡಿ) (ಮೀಟರ್‌ಗಳಲ್ಲಿ ಅಳತೆ: 12.191 x 18.287 ಮೀಟರ್) ವುಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ: **ಪೂರ್ವ** : ಸೈಟ್ ನಂ.6 ಡೋರ್ ನಂ. 3683/17ಎ6ರ ಸೊತ್ತು **ಪಶ್ಚಿಮಕ್ಕೆ** : ಸೈಟ್ ನಂ.6 ಡೋರ್ ನಂ. 3683/17ಎ4ರ ಸೊತ್ತು **ಉತ್ತರ:** ಮೇನ್ ರೋಡ್ **ದಕ್ಷಿಣ** : ಶಾಮನೂರು ಗ್ರೂಪ್ ಪಂಚಾಯತಿಯವರು ವಿಂಗಡಿಸಿರುವ ನಿವೇಶನಗಳು

ಈ ಮಧ್ಯದ ಒಂದು ಖಾಲಿ ನಿವೇಶನವನ್ನು ನನ್ನ ಕಕ್ಷಿದಾರರು ಖರೀದಿಸುವವರಿದ್ದಾರೆ.

**ದಾವಣಗೆರೆ**
**ದಿನಾಂಕ : 06.02.2022**

**ಮಲ್ಲಿಕಾರ್ಜುನ್ ಕಣವಿ** ಬಿ.ಎ. ಎಲ್‌ಎಲ್.ಎಂ , ವಕೀಲರು
ನಂ.5 & 6, 1ನೇ ಅಂತಸ್ತು, ದಾವಣಗೆರೆ ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್, ಹೋಟೆಲ್ ಪೂಜಾ ಇಂಟರ್ ನ್ಯಾಷನಲ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-577006

## ಭಾವಪೂರ್ಣ ಶ್ರದ್ಧಾಂಜಲಿ



ದಿ ದಾವಣಗೆರೆ ಅರ್ಬನ್ ಕೋ ಆಪ್ ಬ್ಯಾಂಕಿನ
ನಿವೃತ್ತ ಸಹಾಯಕ ಲೆಕ್ಕಾಧಿಕಾರಿಯಾದ

**ಶ್ರೀ ಕೆ. ಶಾಂತಕುಮಾರ್**

ಇವರು, ದಿನಾಂಕ 06.02.2022 ರಂದು ನಿಧನರಾಗಿದ್ದು, ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಶ್ರೀ ಅಂದನೂರು ಮುಪ್ಪಣ್ಣ,** ಉಪಾಧ್ಯಕ್ಷರು
**ಶ್ರೀ ಕೋಗುಂಡಿ ಬಕ್ಕೇಶಪ್ಪ,** ಅಧ್ಯಕ್ಷರು

**ಕಾರ್ಯನಿರ್ವಾಹಕ ಮಂಡಳಿ ಸದಸ್ಯರು**

**ಶ್ರೀ ಬಿ.ಸಿ. ಉಮಾಪತಿ**
**ಶ್ರೀ ಪಲ್ಲಾಗಟ್ಟೆ ಶಿವಾನಂದಪ್ಪ**
**ಶ್ರೀ ಟಿ.ಎಸ್. ಜಯರುದ್ರೇಶ್** (ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರು)
**ಶ್ರೀ ಮತ್ತಿಹಳ್ಳಿ ವೀರಣ್ಣ**
**ಶ್ರೀ ಎಂ. ಚಂದ್ರಶೇಖರ್**
**ಶ್ರೀ ದೇವರಮನಿ ಶಿವಕುಮಾರ್** (ವ್ಯವಸ್ಥಾಪನಾ ಮಂಡಳಿ ಸದಸ್ಯರು)
**ಶ್ರೀ ಅಜ್ಜಂಪುರ್ ಶೆಟ್ರು ವಿಜಯಕುಮಾರ್**
**ಶ್ರೀ ಕಂಚಿಕೇರಿ ಮಹೇಶ್** (ವ್ಯವಸ್ಥಾಪನಾ ಮಂಡಳಿ ಸದಸ್ಯರು)
**ಶ್ರೀಮತಿ ಸುರೇಖಾ ಎಂ. ಚಿಗಟೇರಿ**
**ಶ್ರೀ ಎಸ್. ರಾಘವೇಂದ್ರ**
**ಶ್ರೀ ವಿ. ವಿಕ್ರಮ್**
**ಶ್ರೀಮತಿ ಎ.ಆರ್. ಅರ್ಚನಾ**
**ಶ್ರೀ ಇ.ಎಂ. ಮಂಜುನಾಥ್**

**ವೃತ್ತಿಪರ ನಿರ್ದೇಶಕರು**
**ಶ್ರೀ ಮುಂಡಾಸ್ ವೀರೇಂದ್ರ,** ಚಾರ್ಟರ್ಡ್ ಅಕೌಂಟೆಂಟ್
**ಶ್ರೀ ಮಲ್ಲಿಕಾರ್ಜುನ್ ಕಣವಿ,** ವಕೀಲರು

**ವ್ಯವಸ್ಥಾಪನಾ ಮಂಡಲಿ ಸದಸ್ಯರು**
**ಶ್ರೀ ಬೆಳಗಾವಿ ಬಸವರಾಜಪ್ಪ**
**ಶ್ರೀ ಜಂಬಗಿ ರಾಧೇಶ್**
**ಶ್ರೀ ಕೆ. ಕೊಟ್ರೇಶ್**
**ಶ್ರೀ ಬಿ.ಎಸ್. ಮಲ್ಲೇಶ್** ಉಪಪ್ರಧಾನ ವ್ಯವಸ್ಥಾಪಕರು
**ಶ್ರೀ ಡಿ.ವಿ. ಆರಾಧ್ಯಮಠ್** ಪ್ರಧಾನ ವ್ಯವಸ್ಥಾಪಕರು

**ಹಾಗು ಬ್ಯಾಂಕಿನ ಸಿಬ್ಬಂದಿ ವರ್ಗದವರು ಮತ್ತು ಲಕ್ಷ್ಮಿ ಠೇವಣಿ ಸಂಗ್ರಹಕಾರರು ಹಾಗೂ ನಿವೃತ್ತ ನೌಕರರು**


**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್‌ನಲ್ಲಿ, ಡಾಲರ್ಸ್‌ಕಾಲೋನಿಯಲ್ಲಿ
70x63 Corner, 40x50 Corner, 30x50 East, 30x50 South, 30x50, 30x50 West ಅಕ್ಕಪಕ್ಕ
**ಐನಳ್ಳಿ ಚನ್ನಬಸಪ್ಪ, ಏಜೆಂಟ್**
**99166 12110**

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್ ಹತ್ತಿರದ ಖಂಡಪ್ಪನ ಗಲ್ಲಿಯಲ್ಲಿ 45x10 ಅಳತೆಯ ಮನೆ ಬಾಡಿಗೆಗೆ ಇದೆ.
ಸಂಪರ್ಕಿಸಿ :
**ಮೊ. 94480-47506**

**TO LET (ಬಾಡಿಗೆಗೆ)**
ಲೇಡಿಸ್ ಮತ್ತು ಜೆಂಟ್ಸ್ ಪಿ.ಜಿ. ಹಾಗೂ ಹೋಟೆಲ್ ಮಾಡಲು ಸುಸಜ್ಜಿತವಾದ ಬಿಲ್ಡಿಂಗ್ ಬಾಡಿಗೆಗೆ ಇದೆ. ಸಂಪರ್ಕಿಸಿ: ಶುಭ ಸಿರಿ ಬಿಲ್ಡಿಂಗ್, ಹೇಮಾವತಿ ಹಾಸ್ಟೆಲ್ ಎದುರು, BIET ರೋಡ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
**80507 02728**

**WANTED**
**Sulthan Diamonds & Gold** is hiring experienced **Sales men** and **Sales girls** for its Davanagere and Shivamogga showrooms with min 1yr experience in Jewellery.
Send your CV to
**hr@sulthangold.com**
**80500 62916**

**SITE FOR SALE**
30x40 size North facing site in DCM Township, 3rd main, 4th cross is for sale. No brokers
**Ph. : 94822 41707**

**ಮಿಯಾಖಾನ್**
**ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.**
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ, ದಾವಣಗೆರೆ
**ಮೊ : 81339 33804**

# ನರೇಗಾದಿಂದ ಹಳ್ಳಿಗಳ ಅಭಿವೃದ್ಧಿ

**(1ನೇ ಪುಟದಿಂದ)** ಆದರೆ ಪ್ರಸ್ತುತ ದಿನಗಳಲ್ಲಿ ಬಡವರಿಗೆ ಮತ್ತು ಕಾರ್ಮಿಕರಿಗೆ ಅನುಕೂಲ ಆಗಲಿ ಎನ್ನುವ ದೃಷ್ಟಿಯಿಂದ ನೇರವಾಗಿ ಕೂಲಿ ಹಣವನ್ನು 2 ರಿಂದ 3 ತಿಂಗಳಲ್ಲಿ ಅವರ ಖಾತೆಗಳಿಗೆ ಜಮಾ ಮಾಡಲಾಗುತ್ತಿದೆ ಎಂದು ತಿಳಿಸಿದರು.

ದಾವಣಗೆರೆಯಲ್ಲಿ ಒಟ್ಟು 195 ಗ್ರಾಮ ಪಂಚಾಯಿತಿಗಳಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕಗಳ ನಿರ್ಮಾಣ ಮಾಡಲಾಗುತ್ತಿದೆ. ಈಗಾಗಲೇ 100 ಗ್ರಾಮ ಪಂಚಾಯಿತಿಗಳಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪನೆ ಮಾಡಲಾಗಿದೆ. ಜೊತೆಗೆ ಅಮೃತ ಯೋಜನೆಯಡಿ 750 ಗ್ರಾಮ ಪಂಚಾಯಿತಿಗಳಿಗೆ ತಲಾ 25 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗಿದೆ. ಸೋಲಾರ್ ಗ್ರಿಡ್ ಮೂಲಕ ವಿದ್ಯುತ್ ಉತ್ಪಾದನೆ ಮಾಡಿ ಅದನ್ನು ಬಳಕೆ ಮಾಡಿಕೊಂಡು ಉಳಿದ ವಿದ್ಯುತ್ ಮಾರಾಟ ಮಾಡಿ ಆ ಹಣವನ್ನು ಗ್ರಾಮ ಪಂಚಾಯಿತಿಗಳಿಗೆ ವಾಪಸ್ ನೀಡಲಾಗುವುದು, ಗ್ರಾಮದ ಅಭಿವೃದ್ಧಿಗೆ ನಾವೆಲ್ಲರೂ ಶ್ರಮಿಸಬೇಕು ಎಂದರು.

ಕೋವಿಡ್ ನಿಯಂತ್ರಣದಲ್ಲಿ ವಿಶ್ವದಲ್ಲೇ ಭಾರತ ಪ್ರಥಮ ಸ್ಥಾನದಲ್ಲಿದೆ. ಭಾರತದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಅದರಲ್ಲೂ ಹೊನ್ನಾಳಿ ತಾಲ್ಲೂಕು ಪ್ರಥಮ ಸ್ಥಾನದಲ್ಲಿದೆ ಎಂದು ಶ್ಲಾಘಿಸಿದರು.

ಸಿಎಂ ರಾಜಕೀಯ ಕಾರ್ಯದರ್ಶಿ ಹಾಗೂ ಶಾಸಕ ಎಂ. ಪಿ. ರೇಣುಕಾಚಾರ್ಯ ಮಾತನಾಡಿ, ರಾಜ್ಯದಲ್ಲಿ ಗ್ರಾಮಗಳ ಅಭಿವೃದ್ಧಿ, ಸ್ವಚ್ಛತೆ ಕಾಪಾಡುವುದು ಮಹಾತ್ಮ ಗಾಂಧೀಜಿಯವರ ಕನಸಾಗಿತ್ತು ಅದನ್ನು ಕರ್ನಾಟಕದಲ್ಲಿ ಸಚಿವ ಈಶ್ವರಪ್ಪನವರು ನನಸು ಮಾಡುವ ಉದ್ದೇಶದಿಂದ ಅನೇಕ ಯೋಜನೆಗಳನ್ನು ರೂಪಿಸುತ್ತಿದ್ದಾರೆ ಎಂದರು.

ಗ್ರಾಮೀಣಾಭಿವೃದ್ಧಿ ಇಲಾಖೆಯ ಮೂಲಕ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ. ಗ್ರಾಮಗಳಲ್ಲಿ ಕಸ ವಿಲೇವಾರಿ ಮಾಡಲು 27 ಘನತ್ಯಾಜ್ಯ ವಿಲೇವಾರಿ ವಾಹನಗಳನ್ನು ನೀಡಲಾಗಿದೆ. 300 ಜನ ಎಸ್‌ಸಿ, ಎಸ್‌ಟಿ ರೈತರಿಗೆ ಪೈಪು ಮತ್ತು ಪಂಪ್‌ಸೆಟ್ಟುಗಳನ್ನು ವಿತರಿಸಲಾಗಿದೆ, ಅರಕೆರೆ ಗ್ರಾಮದಲ್ಲಿ ಅಂದಾಜು 4 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ವಿಜಯ ಮಹಾಂತೇಶ್ ದಾನಮ್ಮನವರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಾಮ ಪಂಚಾಯತಿ ಅಧ್ಯಕ್ಷ ಎ. ಬಿ. ರಂಗಪ್ಪ, ಹೊನ್ನಾಳಿ ತಹಶೀಲ್ದಾರ್ ಬಸವರಾಜ್, ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಾಮ ಭೋವಿ, ಪಂಚಾಯತ್ ರಾಜ್ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಜಿ.ಎಸ್. ಅಜ್ಜಪ್ಪ, ಗ್ರಾಮ ಪಂಚಾಯತಿ ಉಪಾಧ್ಯಕ್ಷೆ ಕೆ. ಎಸ್. ಮಂಜುಳ ಶಂಕ್ರಾಚಾರಿ, ಎ.ಬಿ. ಹನುಮಂತಪ್ಪ ಅರಕೆರೆ, ಗ್ರಾ ಪಂ ಸದಸ್ಯರು ಹಾಗೂ ಸಿಬ್ಬಂದಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಕಾಂಗ್ರೆಸ್‌ನಿಂದ ಡಿಜಿಟಲ್ ಅಭಿಯಾನ

**(1ನೇ ಪುಟದಿಂದ)** ವಿ.ಎಸ್. ಉಗ್ರಪ್ಪ ಅವರು, ಶಿಕ್ಷಣದಲ್ಲಿ ಧರ್ಮಾಧಾರಿತ ರಾಜಕಾರಣಕ್ಕೆ ಅವಕಾಶವಿರುವುದಿಲ್ಲ. ಶಿಕ್ಷಣದಲ್ಲಿ ಕೋಮುವಾದ ಸೇರಿಸುವುದು ಸಲ್ಲದು. ಉಭಯ ಕೋಮಿನವರು ಪರಸ್ಪರ ಸೌಹಾರ್ದ ಭಾವನೆಯಿಂದ ಇರಬೇಕು. ಪ್ರತಿಷ್ಠೆಗೆ ಹೋಗಿ ವಿದ್ಯಾರ್ಥಿಗಳಲ್ಲಿ ವೈಮನಸ್ಸು ಬರುವಂತಹ ವಾತಾವರಣ ಸೃಷ್ಟಿಸುವುದು ಬೇಡ ಎಂದು ಮನವಿ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ, ಬಿಜೆಪಿಯವರಿಗೆ ಸಂವಿಧಾನದ ಆಶಯಗಳ ಬಗ್ಗೆ ಅರಿವಿಲ್ಲ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಮನಸೋ ಇಚ್ಛೆ ಅಧಿಕಾರ ನಡೆಸುತ್ತಿದ್ದಾರೆಂದು ಕಿಡಿ ಕಾರಿದರು. ನದಿ ಜೋಡಣೆ ಬಗ್ಗೆ ಯಾವ ರಾಜ್ಯದಿಂದ ಪ್ರಸ್ತಾಪ ಬಾರದಿದ್ದರೂ ಪ್ರಧಾನಿಯವರು ಏಕಪಕ್ಷೀಯ ನಿರ್ಧಾರ ಕೈಗೊಂಡು, ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ ಎಂದರು.

## ಇಬ್ರಾಹಿಂ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ

ವಿಧಾನ ಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ಸಂಸ್ಕೃತಿ ಹೀನ ಮನುಷ್ಯ. ನನ್ನನ್ನು ಏಕವಚನದಲ್ಲಿ ಕರೆದಿದ್ದಾರೆ. ಜೀವನದಲ್ಲಿ ಎಷ್ಟು ಬಾರಿ ಚುನಾವಣೆ ಎದುರಿಸಿದ್ದಾರೆ, ಎಷ್ಟು ಬಾರಿ ಗೆದ್ದಿದ್ದಾರೆಂದು ಅವರೇ ಸ್ಪಷ್ಟಪಡಿಸಲಿ. ಸಾಕಷ್ಟು ಭ್ರಷ್ಟಾಚಾರ ಎಸಗಿರುವ ಅವರಿಗೆ ನನ್ನ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಹತಾಶರಾಗಿದ್ದಾರೆ ಮತ್ತು ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆಂದು ಉಗ್ರಪ್ಪ ಇಬ್ರಾಹಿಂ ವಿರುದ್ಧ ವಾಗ್ದಾಳಿ ನಡೆಸಿದರು.

ಅಲ್ಪಸಂಖ್ಯಾತರಿಗೆ ಏನು ಕೊಡುಗೆ ನೀಡಿದ್ದಾರೆಂಬುದನ್ನು ಹೇಳಲಿ. ಕೇವಲ ಬ್ಲಾಕ್ ಮೇಲ್ ರಾಜಕಾರಣ ಮಾಡುವುದು ಸರಿಯಲ್ಲ. ರಾಜಕಾರಣದಲ್ಲಿ ಮಾತು ಕಡಿಮೆ, ಕೃತಿ ಜಾಸ್ತಿ ಮತ್ತು ಬದ್ಧತೆ ಇರಬೇಕು ಎಂದರು. ಕಾಂಗ್ರೆಸ್ ಸಮುದ್ರ ಇದ್ದ ಹಾಗೆ. ಬಹಳಷ್ಟು ಜನ ಬರುತ್ತಾರೆ, ಹೋಗುತ್ತಾರೆ. ಇಬ್ರಾಹಿಂ ಅವರಿಗೆ ಕಾಂಗ್ರೆಸ್‌ನಲ್ಲಿ ತೃಪ್ತಿ ಇದ್ದರೆ ಇರಲಿ, ಇಲ್ಲದಿದ್ದರೆ ಹೋಗಲಿ. ಇಬ್ರಾಹಿಂ ಉಂಡೂ ಹೋದ ಕೊಂಡೂ ಹೋದ ಎಂಬ ಪ್ರವೃತ್ತಿಯವರು ಎಂದು ಟೀಕಿಸಿದರು.

ಇಬ್ರಾಹಿಂ ಅವರಿಗೆ ಬಸವಣ್ಣನವರ ಕೆಲವು ವಚನಗಳನ್ನು ಹೇಳುವ ಮೂಲಕ ನಾನು ಬಸವಣ್ಣನವರ ಅನುಯಾಯಿ ಎಂದು ಹೇಳಿಕೊಳ್ಳುತ್ತಿದ್ದಾರೆ. ನಾನೂ ಕೂಡ ಸಂಸ್ಕೃತವನ್ನು ಚನ್ನಾಗಿ ಬಲ್ಲೆ. ವಿನಾಕಾರಣ ಸಿದ್ಧರಾಮಯ್ಯ ಹಾಗೂ ಕಾಂಗ್ರೆಸ್ ಪಕ್ಷದವರ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಬಾರದು ತಿರುಗೇಟು ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಪಕ್ಷದ ಜಿಲ್ಲಾಧ್ಯಕ್ಷ ಹೆಚ್. ಬಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಮುಖಂಡರಾದ ಬಿ.ಹೆಚ್. ವೀರಭದ್ರಪ್ಪ, ಜಯಕುಮಾರ್, ಅಮೃತೇಶ್ವರ್, ಅನಿತಾಬಾಯಿ, ಎ. ನಾಗರಾಜ್, ಶುಭಮಂಗಳ, ರಾಜೇಶ್ವರಿ, ನಂಜಾನಾಯ್ಕ, ಸುಭಾನ್, ಮಾಗಾನಹಳ್ಳಿ ಬಿ.ಕೆ.ಪರಶುರಾಮ್, ಕೆ. ಎಸ್. ಬಸವಂತಪ್ಪ, ಅಯೂಬ್ ಪೈಲ್ವಾನ್, ಎಸ್.ಕೆ. ಚಂದ್ರಣ್ಣ, ಎಸ್. ಮಲ್ಲಿಕಾರ್ಜುನ್, ಯತಿರಾಜ್, ಕವಿತ, ಸೈಯದ್ ಸೈಫುಲ್ಲಾ, ಹರೀಶ್ ಬಸಾಪುರ, ಅಸ್ಲಾಂಖಾನ್ ಮತ್ತಿತರರು ಉಪಸ್ಥಿತರಿದ್ದರು.


# ಹಿಜಾಬ್ ಅವಕಾಶಕ್ಕೆ ಆಗ್ರಹ

**(1ನೇ ಪುಟದಿಂದ)** ಕೋಮು ಧ್ರುವೀಕರಣ ಮಾಡಲು ಹೊರಟಿದೆ. ಸಾಚಾರ್ ವರದಿಯ ಪ್ರಕಾರ ಮುಸ್ಲಿಂ ಮಹಿಳೆಯರು ಶೈಕ್ಷಣಿಕ ಕ್ಷೇತ್ರದಲ್ಲಿ ಭಾರೀ ಹಿನ್ನಡೆಯಲ್ಲಿದ್ದಾರೆ ಎಂಬ ವರದಿ ಬಹಿರಂಗಗೊಂಡಿತ್ತು. ಅದರ ನಂತರ ನಿರಂತರವಾದ ಜಾಗೃತಿಯಿಂದ ಮುಸ್ಲಿಂ ಮಹಿಳೆಯರು ಶಿಕ್ಷಣ ಹಾಗೂ ಉನ್ನತ ಹುದ್ದೆಯನ್ನು ಪಡೆಯಲು ಸಾಧ್ಯವಾಗಿದೆ. ಇದನ್ನು ಕಂಡು ಸಹಿಸದ ಸಂಘ ಪರಿವಾರ ಮುಸ್ಲಿಂ ಮಹಿಳೆಯರನ್ನು ಭಯಭೀತಗೊಳಿಸಿ ಶಿಕ್ಷಣವನ್ನು ಮೊಟಕುಗೊಳಿಸಬೇಕೆಂಬ ದೃಷ್ಟಿಯಿಂದ ಈ ರೀತಿಯ ಅಜೆಂಡಾಗಳನ್ನು ಸೃಷ್ಟಿ ಮಾಡುತ್ತಿದೆ ಎಂದು ಎಂದು ಆರೋಪಿಸಿದರು.

ಶಿರವಸ್ತ್ರ ಹತ್ತಿಕ್ಕುವಂತಹ ವ್ಯವಸ್ಥಿತ ಷಡ್ಯಂತ್ರವನ್ನು ರೂಪಿಸಿರುವ ಸಂಘ ಪರಿವಾರದ ಕಿರಾತಕರ ವಿರುದ್ಧ ಪೋಲೀಸ್ ಇಲಾಖೆ ಹಾಗೂ ಜಿಲ್ಲಾಡಳಿತ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಮಹಿಳೆಯರ ಸಬಲೀಕರಣ ಮತ್ತು ಸುರಕ್ಷತೆಗೆ ಬೇಕಾಗುವ ಎಲ್ಲಾ ರೀತಿಯ ಕ್ರಮಗಳನ್ನು ಸರ್ಕಾರ ಹಾಗೂ ಜಿಲ್ಲಾಡಳಿತ ಕೈಗೊಳ್ಳಬೇಕು. ಈ ವಿವಾದವನ್ನು ಸಂವಿಧಾನ ನೀಡಿರುವ ಹಕ್ಕಿನಂತೆ ನಿಯಂತ್ರಿಸಿ ಹಾಗೂ ಮುಸ್ಲಿಂ ವಿದ್ಯಾರ್ಥಿನಿಯರು ಶಿರವಸ್ತ್ರ ಧರಿಸಿ ಶಾಲೆಗೆ ಹೋಗುವಂತಹ ವ್ಯವಸ್ಥೆಯನ್ನು ಸರ್ಕಾರ ಹಾಗೂ ಶಿಕ್ಷಣ ಇಲಾಖೆ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಯಾಸ್ಮಿನ್ ತಾಜ್, ನಿಭಾ ನಾಜ್, ಜಮೀರ್ ಬಾನು, ಅಮ್ರಿನ್ ತಾಜ್, ಸೈಯದಾ ಆಪಾ, ಶಬಾನು ಬಾನು, ಸಫೂರ ಬಾನು, ಮುಜೀಬಾ ಆಪಾ, ಖುರತ್ ಉಲ್ ಐನ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಪ್ರತಿಭಟನೆ ಹಿನ್ನೆಲೆಯಲ್ಲಿ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಸಿಪಿಐ ಗುರುಬಸವರಾಜ್ ನೇತೃತ್ವ ದಲ್ಲಿ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು.

ಪ್ರಪ್ರಥಮ ಬಾರಿಗೆ ದಾವಣಗೆರೆ ನಗರದಲ್ಲಿ

ಕೃಷಿಮೇಳ

KRISHI MELA

ದಿನಾಂಕ: 18, 19 ಮತ್ತು 20 ಫೆಬ್ರವರಿ 2022

ಸ್ಥಳ: ಹೈಸ್ಕೂಲ್ ಮೈದಾನ, ಮಹಾನಗರ ಪಾಲಿಕೆ ಎದುರಿಗೆ, ದಾವಣಗೆರೆ

FOR STALL BOOKING PLEASE CONTACT

Mob: 9480424603 / 9986814680


# ಕೊರೊನಾ 3ನೇ ವಾರಕ್ಕೆ ಅಂತ್ಯ

**(1ನೇ ಪುಟದಿಂದ)** ಎಚ್ಚರಿಕೆ ಕ್ರಮಗಳಿಂದಲೇ ನಾವು ಮೂರನೇ ಅಲೆಯನ್ನು ಎದುರಿಸಿದ್ದೇವೆ. ಹೀಗೆಂದು, ಸಾರ್ವಜನಿಕರು ಕಟ್ಟುಪಾಡುಗಳನ್ನು ಬಿಟ್ಟು ಮೈಮರೆಯಬಾರದೆಂದು ಎಚ್ಚರಿಕೆ ನೀಡಿದ್ದಾರೆ.

ಮೂರನೇ ಅಲೆ ಮುಕ್ತಾಯ ಆಯಿತು ಎಂದು ಜನ ಲಸಿಕೆ ಹಾಕಿಸಿಕೊಳ್ಳದೇ ಮೊಂಡುತನ ತೋರಬಾರದು. ಮಾಸ್ಕ್ ಇಲ್ಲದೆ ಓಡಾಡುವುದು, ಸಾಮಾಜಿಕ ಅಂತರ ಕಾಪಾ ಡುವುದನ್ನು ಮರೆಯಬಾರದು ಎಂದು ತಿಳಿಸಿದ್ದಾರೆ.

# ಕೃಷಿ ಯಂತ್ರೋಪಕರಣಕ್ಕೆ ಅರ್ಜಿ

ದಾವಣಗೆರೆ, ಫೆ.7- ತಾಲ್ಲೂಕಿನಲ್ಲಿ ಸಾಮಾನ್ಯ ವರ್ಗದ ರೈತರಿಗೆ ಶೇ.50ರ ರಿಯಾಯಿತಿ ದರದಲ್ಲಿ ಕೃಷಿ ಯಂತ್ರೋಪಕರಣಗಳು ಹಾಗೂ ಕೃಷಿ ಸಂಸ್ಕರಣ ಘಟಕಗಳಾದ ರಾಗಿ ಕ್ಲೀನಿಂಗ್ ಮಷಿನ್, ಹಿಟ್ಟಿನ ಗಿರಣಿ, ಖಾರದಪುಡಿ ಮಷಿನ್ ಮತ್ತು ತಾಡಪಾಲುಗಳು ಸಹಾಯಧನದಲ್ಲಿ ಲಭ್ಯವಿದ್ದು, ರೈತರು ಅರ್ಜಿ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಆಯಾ ಹೋಬಳಿ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರಗಳ ಕೃಷಿ ಅಧಿಕಾರಿಗಳನ್ನು ಸಂಪರ್ಕಿಸಬಹುದು.

# ನಗರದಲ್ಲಿ ಇಂದು ತ್ಯಾಜ್ಯದಿಂದ ಕಲಾಕೃತಿ ಸ್ಪರ್ಧೆ

ಮಹಾನಗರ ಪಾಲಿಕೆ ಮತ್ತು ಜೈನ್ ವಿದ್ಯಾಲಯದ ಸಹಯೋಗದಲ್ಲಿ ಇಂದು ಬೆಳಿಗ್ಗೆ ಪಿ.ಜೆ. ಬಡಾವಣೆಯಲ್ಲಿರುವ ಜೈನ್ ವಿದ್ಯಾಲಯದಲ್ಲಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ 'ತ್ಯಾಜ್ಯದಿಂದ ಕಲಾಕೃತಿ' ರಚನಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ವರು ಕಲಾ ಶಿಕ್ಷಕ ನಿತಿನ್ (8660455403) ಅವರನ್ನು ಸಂಪರ್ಕಿಸಬಹುದು.

# ಅಲ್ಪಸಂಖ್ಯಾತರ ತುಷ್ಟೀಕರಣ ಕೈ ಬಿಡಿ

**(1ನೇ ಪುಟದಿಂದ)** ಶಾಸಕ ಎಂ.ಪಿ. ರೇಣುಕಾಚಾರ್ಯ ಸಚಿವ ಸ್ಥಾನಕ್ಕೆ ಅರ್ಹರು. ಆದರೆ, ಎಲ್ಲರಿಗೂ ಸಚಿವ ಸ್ಥಾನ ನೀಡಲು ಸಾಧ್ಯವಿಲ್ಲ. ಕಾಂಗ್ರೆಸ್-ಜೆಡಿಎಸ್ ಪಕ್ಷಗಳಿಂದ ಬಿಜೆಪಿಗೆ ಬಂದಿರುವ 15 ಶಾಸಕರಿಗೆ ಸಚಿವ ಸ್ಥಾನ ನೀಡಲೇಬೇಕಾಗಿರುವ ಕಾರಣಕ್ಕೆ ನಮ್ಮ ಶಾಸಕರು ತ್ಯಾಗ ಮಾಡಬೇಕಾಗಿದೆ. ಮುಂದಿನ ದಿನಗಳಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತ ಲಭಿಸಿದರೆ ಈ ಸಮಸ್ಯೆ ಉದ್ಭವಿಸುವುದಿಲ್ಲ ಎಂದು ಹೇಳಿದರು.

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಶಾಸಕ ಎಂ.ಪಿ. ರೇಣುಕಾಚಾರ್ಯ ಸಚಿವ ಸ್ಥಾನದ ಬಗ್ಗೆ ಮಾಧ್ಯಮಗಳಿಗೆ ಅನಗತ್ಯ ಹೇಳಿಕೆ ನೀಡುವುದು ತರವಲ್ಲ. ಹಾದಿ-ಬೀದಿ ರಂಪ ಮಾಡಬಾರದು. ಇವರು ಹೀಗೆ ಮಾಡುವುದರಿಂದ ಪ್ರತಿಪಕ್ಷದವರಿಗೆ ಆಹಾರವಾಗುತ್ತಾರೆ. ಹಾಗಾಗಿ, ಪಕ್ಷಕ್ಕೆ ಮುಜುಗರವನ್ನುಂಟು ಮಾಡುವ ಹೇಳಿಕೆಗಳನ್ನು ನೀಡಬಾರದು ಎಂದು ಸೂಚ್ಯವಾಗಿ ತಿಳಿಸಿದರು.

ಶಾಸಕ ಎಂ.ಪಿ. ರೇಣುಕಾಚಾರ್ಯ, ಜಿಪಂ ಮಾಜಿ ಉಪಾಧ್ಯಕ್ಷ ಸಿ. ಸುರೇಂದ್ರನಾಯ್ಕ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅರಕೆರೆ ಎ.ಎಂ. ನಾಗರಾಜ್, ಮುಖಂಡರಾದ ಎ.ಬಿ. ಹನುಮಂತಪ್ಪ, ಕೆ.ಪಿ. ಕುಬೇರಪ್ಪ, ರಂಗಪ್ಪ ಇತರರು ಸುದ್ದಿಗೋಷ್ಠಿಯಲ್ಲಿ ಇದ್ದರು.

# ಆಧಾರ್ ಕಡ್ಡಾಯವಲ್ಲ

**(1ನೇ ಪುಟದಿಂದ)** ಪ್ಯಾನ್ ಕಾರ್ಡ್ ಸೇರಿದಂತೆ ಒಂಭತ್ತು ರೀತಿಯ ದಾಖಲೆಗಳನ್ನು ಲಸಿಕೆಗಾಗಿ ಸಲ್ಲಿಸಬಹುದು ಎಂದು ತಿಳಿಸಲಾಗಿದೆ. ಆಧಾರ್ ಕಾರ್ಡ್ ಕಡ್ಡಾಯಗೊಳಿಸಲಾಗಿದೆ ಎಂದು ಸಿದ್ಧಾರ್ಥ ಶಂಕರ್ ಶರ್ಮ ಎಂಬುವವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ನಂತರದಲ್ಲಿ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿತ್ತು.

# ಲಂಚ ಒಪ್ಪಿಕೊಂಡ ಸಿಎಂ ಸಂಬಂಧಿ

**(1ನೇ ಪುಟದಿಂದ)** 7.9 ಕೋಟಿ ರೂ.ಗಳ ನಗದು ವಶಪಡಿಸಿಕೊಡಿತ್ತು. ಹನಿ ಜೊತೆ ಸಂಪರ್ಕದಲ್ಲಿದ್ದ ಇನ್ನೋರ್ವ ವ್ಯಕ್ತಿ ಸಂದೀಪ್ ಕುಮಾರ್ ನಿವಾಸದಿಂದ 2 ಕೋಟಿ ರೂ. ವಶಪಡಿಸಿಕೊಳ್ಳಲಾಗಿತ್ತು. ಪಂಜಾಬ್ ವಿಧಾನ ಸಭಾ ಚುನಾವಣೆ ಸಮೀಪಿಸುತ್ತಿರುವ ನಡುವೆಯೇ ಜಾರಿ ನಿರ್ದೇಶನಾಲಯ ತೆಗೆದುಕೊಂಡಿರುವ ಕ್ರಮಗಳು ರಾಜಕೀಯ ವಲಯದಲ್ಲಿ ಸಂಚಲನಕ್ಕೆ ಕಾರಣವಾಗಿವೆ. ಫೆಬ್ರವರಿ 20ರಂದು ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದೆ.

# ಹಿಂಜಾವೇ ಪ್ರತಿಭಟನೆ

**(1ನೇ ಪುಟದಿಂದ)** ಹಾಗೂ ಶಿಕ್ಷಣ ಇಲಾಖೆ ಈ ಷಡ್ಯಂತ್ರದ ಒತ್ತಡಕ್ಕೆ ಮಣಿದು ಹಿಜಾಬ್ ಧರಿಸಲು ಅವಕಾಶ ನೀಡಿದ್ದಲ್ಲಿ ಜಿಲ್ಲೆಯ ಎಲ್ಲಾ ಶಾಲಾ-ಕಾಲೇಜುಗಳ ಹಿಂದೂ ವಿದ್ಯಾರ್ಥಿಗಳನ್ನು ಸಂಘಟಿಸಿ ಸಮವಸ್ತ್ರದ ಜೊತೆಗೆ ಕೇಸರಿ ಶಲ್ಯ ಧರಿಸುವ ಅಭಿಯಾನವನ್ನು ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಹಿಂಜಾವೇ ಮುಖಂಡ ಸತೀಶ್ ಪೂಜಾರಿ, ಹಿಂದೂ ಯುವ ವಾಹಿನಿ ಜಿಲ್ಲಾ ಸಂಯೋಜಕ ಎಲ್. ಚೇತನ್, ಉಮೇಶ್ ಕತ್ತಿ, ವಿಶ್ವನಾಥ್, ಶಿವಾಜಿ, ಸಂತೋಷ್, ಪುನೀತ್, ಮಂಜುನಾಥ, ಚಂದ್ರು, ಕೀರ್ತಿ ಗೌಡ, ಚಿನ್ಮಯ್, ಗುರುಚರಣ್, ಗಿರೀಶ್ ಪ್ರಸಾದ್, ವೀರೇಶ್, ಕಿರಣ್, ಲಿಂಗರಾಜು, ಭಾನು ಪ್ರಕಾಶ್, ರುದ್ರೇಶ್, ದಿವ್ಯ ಸೇರಿದಂತೆ ಇತರರು ಭಾಗವಹಿಸಿದ್ದರು.

**ಪೊಲೀಸ್ ಬಂದೋಬಸ್ತ್:** ಪ್ರತಿಭಟನೆ ಹಿನ್ನೆಲೆಯಲ್ಲಿ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಸಿಪಿಐ ಗುರುಬಸವರಾಜ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು.


ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನ
ವಿನೋಬನಗರ 1ನೇ ಮುಖ್ಯರಸ್ತೆ ದಾವಣಗೆರೆ.



ಇಂದು ಹಂದರ ಕಂಬ ಪೂಜೆ

ಮಾರ್ಚ್ 15 ಮತ್ತು 16 ರಂದು ನಡೆಯಲಿರುವ ವಿನೋಬನಗರದ ಶ್ರೀ ಚೌಡೇಶ್ವರಿ ದೇವಿ ಜಾತ್ರೆ ಪ್ರಯುಕ್ತ ಇಂದು ಹಂದರ ಕಂಬ ಪೂಜೆ ನಡೆಯಲಿದ್ದು, ಈ ಕಾರ್ಯಕ್ರಮಕ್ಕೆ ಆಗಮಿಸುತ್ತಿರಿರುವ ಸಮಿತಿಯ ಎಲ್ಲಾ ಪದಾಧಿಕಾರಿಗಳಿಗೆ, ಎಲ್ಲಾ ಭಕ್ತಾದಿಗಳಿಗೆ, ಸಾರ್ವಜನಿಕರಿಗೆ ಹಾಗು ರಾಜಕೀಯ ಮುಖಂಡರುಗಳಿಗೆ ಸ್ವಾಗತ ಕೋರುತ್ತೇವೆ. ಹಾಗೂ ಜಾತ್ರೆ ಯಶಸ್ವಿಯಾಗಿ ನಡೆಯಲಿ ಎಂದು ಹಾರೈಸುತ್ತೇವೆ.



ಶ್ರೀನಿವಾಸ್ ದಾಸಕರಿಯಪ್ಪ
ಅಧ್ಯಕ್ಷರು.



ಜೆ.ಎಸ್. ಹೊನ್ನಪ್ಪ
ಪ್ರಧಾನ ಕಾರ್ಯದರ್ಶಿ



ಹೆಚ್.ದಿವಾಕರ್, ವಕೀಲರು
ಖಜಾಂಚಿ

ಶುಭ ಕೋರುವವರು:

- ♦ **ಡಿ.ಜಿ. ಮಂಜುನಾಥ್** (ಚುಕ್ಕಿ), ರಾಜ್ಯ ಸಮಿತಿ ಸದಸ್ಯರು, ಕೈಗಾರಿಕೆ ಪ್ರಕೋಷ್ಠ, ಬಿಜೆಪಿ ಕರ್ನಾಟಕ
- ♦ **ತಿರುಮಲ್ಲೇಶ್,** ಜಿಲ್ಲಾ ಸಮಿತಿ ಸದಸ್ಯರು , ಪ್ರಬುದ್ಧರ ಪ್ರಕೋಷ್ಠ, ದಾವಣಗೆರೆ ಜಿಲ್ಲೆ.
- ♦ **ಹಿಂದೂ ಮಹಾಗಣಪತಿ,** ಹೈಸ್ಕೂಲ್ ಮೈದಾನ, ದಾವಣಗೆರೆ
- ♦ **ಸಮರ್ಥ್ ಗ್ರೂಪ್,** ವಿನೋಬನಗರ, ದಾವಣಗೆರೆ.



ಅಭಿನಂದನೆಗಳು



ದಾವಣಗೆರೆ ವಿಶ್ವವಿದ್ಯಾನಿಲಯದ 2021ನೇ ಸಾಲಿನ ಎಂ.ಎ. ಪರೀಕ್ಷೆಯ ಸಮಾಜಶಾಸ್ತ್ರ ವಿಭಾಗದಲ್ಲಿ 5ನೇ ರ್‍ಯಾಂಕ್ ಪಡೆದಿರುವ ದಾವಣಗೆರೆ ವಿನೋಬನಗರದ ಹಿರಿಯ ವಕೀಲರಾದ ಎಸ್. ಜಯಣ್ಣ ಮತ್ತು ಶ್ರೀಮತಿ ಎಂ. ಶಾಂತಲಾ ದಂಪತಿಯ ಪುತ್ರಿ

**ಕು॥ ಜೆ. ಲೀಲಾಪಲ್ಲವಿ**

ಅವರಿಗೆ ಹೃತ್ಪೂರ್ವಕ ಅಭಿನಂದನೆ ಬಯಸುವವರು

- ♦ **ಎ. ನಾಗರಾಜ್,** ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕರು, ದಾವಣಗೆರೆ
- ♦ **ಶ್ರೀಮತಿ ರೇಖಾ ನಾಗರಾಜ್,** ಮಹಾನಗರ ಪಾಲಿಕೆ ಮಾಜಿ ಮಹಾಪೌರರು, ದಾವಣಗೆರೆ
- ♦ ಜೆ. ಹೇಮಾರಾಣಿ ♦ ಎ.ಎಸ್. ಶಿವರುದ್ರಪ್ಪ ♦ ಎಂ. ಮಂಜುಳ
- ♦ ಎಂ. ಸುಗಂಧಿನಿಪುಷ್ಪಾ ಜಯ್ಯಪ್ಪ
- ♦ ಎಂ. ಲತಾಂಗಿಉಮಾ ಶಾಂತರಾಜ್
- ♦ ಡಾ॥ ಮಂಜೇಶ್ ♦ ಯಶಸ್ಸ್
- ♦ ವಿಶ್ವಾಸ್ ♦ ಎ.ಎಸ್. ಸತೀಶ್ ♦ ಮಂಜುಳ ♦ ವರ್ಣಿಕ ♦ ಗಹನ್



**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ**
**ಕಮರ್ಷಿಯಲ್ ಓ.ಎಸ್. ಸಂಖ್ಯೆ 97/2021**

ವಾದಿ : ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಸ್.ಎನ್. ಲೇಔಟ್, ಶಾಖೆ, ದಾವಣಗೆರೆ. ಇದನ್ನು ಪ್ರತಿನಿಧಿಸುವವರು ಬ್ರಾಂಚ್ ಮ್ಯಾನೇಜರ್ - ವಿರುದ್ಧ -

ಪ್ರತಿವಾದಿ : ಮೆ॥ ನಿಮಿಷಾಂಭ ಜ್ಯೂಯಲರ್ಸ್, ಇದರ ಪ್ರೊಪ್ರೈಟರ್, ಶ್ರೀ ಸದಾನಂದ ಪಿ. ಯಶವಂತ್ ಬಿನ್ ಲೇಟ್ ಪ್ರಕಾಶ್ ರಾವ್ ವೈ. ಮೃತರಾಗಿದ್ದು, ವಾರಸುದಾರರಾದ ಶ್ರೀಮತಿ ಕಾಂಚನ ಎಸ್. ಕೋಂ ಲೇಟ್ ಸದಾನಂದ ಪಿ. ಯಶವಂತ್, ವಯಸ್ಸು 39 ವರ್ಷ, ವಾಸ : 1798, ನಿಮಿಷಾಂಭ ಕಾಂಪ್ಲೆಕ್ಸ್, 3 ಮತ್ತು 4ನೇ ಮೇನ್ ಮಧ್ಯ, ವಿನೋಬನಗರ, ಪಿ.ಬಿ. ರಸ್ತೆ, ದಾವಣಗೆರೆ.

**ಸಾರ್ವಜನಿಕ ಪ್ರಕಟಣೆಗಾಗಿ**

ಈ ಮೇಲ್ಕಂಡ ವಾದಿಯು ದಾವಣಗೆರೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ದಿನಾಂಕ : 9.11.2021ರಂದು ರೂ. 2,51,551/- ಮತ್ತು ರೂ. 14,20,140/- ಗಳ ವಸೂಲಾತಿಗಾಗಿ ತಮ್ಮ ವಿರುದ್ಧ ದಾವಾ ಸಲ್ಲಿಸಿದ್ದು, ಸದರಿ ದಾವಾದಲ್ಲಿ ತಮಗೆ ಮಾನ್ಯ ಘನ ನ್ಯಾಯಾಲಯದಿಂದ ಹಾಜರಾಗಲು ಸಮನ್ಸ್‌ಗಳು ಬಂದಿದ್ದು, ತಾವು ಹಾಜರಾಗಿರುವುದಿಲ್ಲ. ಇದರ ಪ್ರಯುಕ್ತ ಈ ಬಗ್ಗೆ ದಾವಾ ಮುಂದಿನ ನಡವಳಿಕೆಗಳಲ್ಲಿ ತಮಗೆ ನ್ಯಾಯಾಲಯಕ್ಕೆ ಹಾಜರಾಗಲು ಮತ್ತು ಈ ಬಗ್ಗೆ ತಮ್ಮ ತಕರಾರು ಇದ್ದಲ್ಲಿ ಖುದ್ದಾಗಿ ಆಗಲೀ ಅಥವಾ ವಕೀಲರ ಮುಖಾಂತರವಾಗಿಯಾಗಲೀ ದಿ. 18.03.2022 ರಂದು ಬೆಳಗ್ಗೆ 11.00 ಗಂಟೆಗೆ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು, ತಪ್ಪಿದ್ದಲ್ಲಿ ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ತಾರೀಖು 7.2.2022 ರಂದು ಕೊಡಲ್ಪಟ್ಟಿದೆ.

ಐ.ಕೆ. ಮಂಜುಳ, ವಿ.ಆರ್. ಚಂದ್ರಶೇಖರ್
ವಾದಿ ಪರ ವಕೀಲರು, # 4/700
ದೀಕ್ಷಿತ್ ರಸ್ತೆ, ದಾವಣಗೆರೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಮುಖ್ಯ ಆಡಳಿತಾಧಿಕಾರಿಗಳು
(ಬಿ. ಶ್ರೀನಿವಾಸ್), ಪ್ರಧಾನ ಜಿಲ್ಲಾ ಮತ್ತು ಸತ್ರ ಜಡ್ಜ್‌ರವರ ನ್ಯಾಯಾಲಯ, ದಾವಣಗೆರೆ.



ಆಜಾದ್ ನಗರ ಹಾಗೂ ಬಾಷಾ ನಗರದಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಮಹಾನಗರ ಪಾಲಿಕೆ 9 ಮತ್ತು 12ನೇ ವಾರ್ಡ್ ಆಜಾದ್ ನಗರ ಹಾಗೂ ಬಾಷಾ ನಗರದಲ್ಲಿ ವಿವಿಧ ಯೋಜನೆಯಡಿ ಮಂಜೂರಾಗಿರುವ ಕಾಮಗಾರಿಗಳಿಗೆ ಅಂದಾಜು ರೂ 76.50 ಲಕ್ಷ ಮೊತ್ತದಲ್ಲಿ ಭೂಮಿ ಪೂಜೆ ಸಮಾರಂಭ





| ಕಾಮಗಾರಿಯ ವಿವರ | ಅಂದಾಜು ಮೊತ್ತ | ಸ್ಥಳ | ಸಮಯ | ಅನುದಾನ |
|---|---|---|---|---|
| ವಾರ್ಡ್.ನಂ. 9ರ ವ್ಯಾಪ್ತಿಯಲ್ಲಿ ಬರುವ ಆಜಾದ್‌ನಗರ 5ನೇ ಅಡ್ಡ ರಸ್ತೆಯ ಒಂದು ಬದಿಯಲ್ಲಿ ಸಿ.ಸಿ.ಚರಂಡಿ ಮತ್ತು ಕವರಿಂಗ್ ಸ್ಲ್ಯಾಬ್ ನಿರ್ಮಾಣದ ಕಾಮಗಾರಿ | 16.50 | ಅಜಾದ್ ನಗರ, 1ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ, | ಮಧ್ಯಾಹ್ನ 1.30 | 2021–22 ಸ್ಥಳೀಯ ಶಾಸಕರ ಅನುದಾನ |
| ವಾರ್ಡ್ ನಂ.9ರ ಬಾಷಾನಗರ 2ನೇ ಮೇನ್ 1ನೇ ಕ್ರಾಸ್‌ನ ಎರಡು ಕಡೆ ಬಾಕ್ಸ್ ಚರಂಡಿ ನಿರ್ಮಾಣ ಮಾಡಿ ಕವರಿಂಗ್ ಸ್ಲ್ಯಾಬ್ ಅಳವಡಿಸುವ ಕಾಮಗಾರಿ. | 18.00 | | | ಮಹಾನಗರ ಪಾಲಿಕೆ 15ನೇ ಹಣಕಾಸು ಅನುದಾನ |
| ವಾರ್ಡ್ ನಂ. 12 ವ್ಯಾಪ್ತಿಯಲ್ಲಿ ಬರುವ ಆಜಾದ್ ನಗರ 1 ಮತ್ತು 2ನೇ ಮುಖ್ಯ ರಸ್ತೆಗಳಿಗೆ ಸಿ.ಸಿ.ಚರಂಡಿ ನಿರ್ಮಿಸಿ ಕವರಿಂಗ್ ಸ್ಲ್ಯಾಬ್ ಅಳವಡಿಸುವ ಕಾಮಗಾರಿ | 18.00 | ಅಜಾದ್ ನಗರ, 2ನೇ ಮುಖ್ಯ ರಸ್ತೆ, 15ನೇ ಅಡ್ಡ ರಸ್ತೆ, | ಮಧ್ಯಾಹ್ನ 1.00 | 2021–22 ಸ್ಥಳೀಯ ಶಾಸಕರ ಅನುದಾನ |
| ವಾರ್ಡ್ ನಂ.12, ಅಜಾದ್‌ನಗರ 13ನೇ ಅಡ್ಡ ರಸ್ತೆ ಮತ್ತು 15ನೇ ಅಡ್ಡ ರಸ್ತೆ ಎರಡು ಬದಿಯಲ್ಲಿ ಸಿ.ಸಿ. ಚರಂಡಿ ನಿರ್ಮಿಸಿ ಕವರಿಂಗ್ ಸ್ಲ್ಯಾಬ್ ಅಳವಡಿಸುವ ಕಾಮಗಾರಿ. | 24.00 | | | ಮಹಾನಗರ ಪಾಲಿಕೆ ಸಾಮಾನ್ಯ ನಿಧಿ |

ಈ ಎಲ್ಲಾ ವಿವಿಧ ಕಾಮಗಾರಿಗಳ ಭೂಮಿ ಪೂಜೆಗೆ ಆಗಮಿಸುತ್ತಿರುವ ಜನಪ್ರಿಯ ಶಾಸಕರಾದ

ಸನ್ಮಾನ್ಯ **ಡಾ॥ ಶಾಮನೂರು ಶಿವಶಂಕರಪ್ಪ**

ಅವರಿಗೂ, ಮಹಾನಗರ ಪಾಲಿಕೆಯ ಎಲ್ಲಾ ಕಾಂಗ್ರೆಸ್ ಸದಸ್ಯರುಗಳಿಗೂ, ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರುಗಳಿಗೂ ಮತ್ತು ಕಾರ್ಯಕರ್ತರಿಗೂ ಹಾಗೂ ಅಭಿಮಾನಿಗಳಿಗೂ

**ಹೃದಯಪೂರ್ವಕ ಸ್ವಾಗತ ಸುಸ್ವಾಗತ**



ಜಾಕೀರ್ ಅಲಿ
ಸದಸ್ಯರು, 9ನೇ ವಾರ್ಡ್
ಮಹಾನಗರ ಪಾಲಿಕೆ, ದಾವಣಗೆರೆ




ಶ್ರೀಮತಿ ಉರ್‌ಬಾನ್
ಸದಸ್ಯರು, 12ನೇ ವಾರ್ಡ್
ಮಹಾನಗರ ಪಾಲಿಕೆ, ದಾವಣಗೆರೆ



ಶಫಿಕ್ ಪಂಡಿತ್
ಮಾಜಿ ಸದಸ್ಯರು,
ಮಹಾನಗರ ಪಾಲಿಕೆ, ದಾವಣಗೆರೆ




ಫೆ.9 ರಂದು ರಾಜನಹಳ್ಳಿ ಶ್ರೀ ಪೀಠದಲ್ಲಿ ಸರಳ ಪೂಜಾ ಕಾರ್ಯಕ್ರಮಗಳು



ಹರಿಹರ ತಾ. ರಾಜನಹಳ್ಳಿಯ ಶ್ರೀ ವಾಲ್ಮೀಕಿ ಗುರು ಪೀಠದಲ್ಲಿ ವಾಲ್ಮೀಕಿ ಜಾತ್ರೆ ಬದಲಾಗಿ ಫೆ.9 ರಂದು ಶ್ರೀ ಪೀಠದ ವಾರ್ಷಿಕೋತ್ಸವದ ಅಂಗವಾಗಿ ಸರಳ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸಮಾಜದ ಮುಖಂಡರಿಗೆ ಸ್ವಾಗತ ಕೋರುವವರು

- * ಜಿಲ್ಲಾ ವಾಲ್ಮೀಕಿ ನಾಯಕ ಸಮಾಜ
- * ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜ
- * ನಾಯಕ ವಿದ್ಯಾರ್ಥಿ ನಿಲಯ, ದಾವಣಗೆರೆ.
- * ಜಿಲ್ಲಾ ವಾಲ್ಮೀಕಿ ನಾಯಕ ನೌಕರರ ಸಂಘ
- * ಜಿಲ್ಲಾ ವಾಲ್ಮೀಕಿ ನಾಯಕ ಮಹಿಳಾ ಸಂಘ
- * ಜಿಲ್ಲಾ ವಾಲ್ಮೀಕಿ ಯುವ ಘಟಕ



ಹದಡಿ ಹಾಲಪ್ಪ
ಅಧ್ಯಕ್ಷರು, ತಾಲ್ಲೂಕು ನಾಯಕ ಸಮಾಜ



ಬಿ.ವೀರಣ್ಣ
ಅಧ್ಯಕ್ಷರು, ಜಿಲ್ಲಾ ನಾಯಕ ಸಮಾಜ



**ಮಂಜಿನಲ್ಲಿ ಮುಳುಗಿದ ನಗರ**

**ದಾವಣಗೆರ : ನಗರದಲ್ಲಿ ಸೋಮವಾರ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಇದ್ದಕ್ಕಿದ್ದಂತೆ ಗಾಢ ಮಂಜು ಆವರಿಸಿತು. 8 ಗಂಟೆಯಾದರೂ ಮಂಜು ಕರಗಲಿಲ್ಲ. ವಾಹನ ಸವಾರರು ಹೆಡ್‌ಲೈಟ್ ಹಾಕಿಕೊಂಡರೂ ರಸ್ತೆ ನೋಡಲು ಕಸರತ್ತು ಮಾಡಬೇಕಾಯಿತು. ಕಳೆದ ನವೆಂಬರ್‌ನಲ್ಲಿ ಅಕಾಲಿಕ ಮಳೆ ಸುರಿದ ರೀತಿಯಲ್ಲೇ ಫೆಬ್ರವರಿಯಲ್ಲಿ ಅಕಾಲಿಕ ಮಂಜು ಸುರಿಯಿತೇ ಎಂಬ ಮಾತುಗಳು ಸಾರ್ವಜನಿಕರಲ್ಲಿ ಕೇಳಿ ಬಂದವು.**

# ದಾವಣಗೆರೆ ವಿಶ್ವವಿದ್ಯಾಲಯ ಪರೀಕ್ಷೆ ದವನ್ ಕಾಲೇಜಿಗೆ ಅತ್ಯಧಿಕ 8 ರ್‍ಯಾಂಕ್‌ಗಳು



ದಾವಣಗೆರೆ, ಫೆ.7- ದಾವಣಗೆರೆ ವಿಶ್ವವಿದ್ಯಾಲಯದ 2020-21ನೇ ಸಾಲಿನ ಪದವಿ ಪರೀಕ್ಷೆಯಲ್ಲಿ ನಗರದ ದವನ್ ಕಾಲೇಜಿಗೆ ಶೇ.95ರಷ್ಟು ಫಲಿತಾಂಶದೊಂದಿಗೆ ಬಿ.ಕಾಂ, ಬಿ.ಬಿ.ಎಂ. ಬಿಸಿಎ ಪದವಿಯಲ್ಲಿ 8 ರ್‍ಯಾಂಕ್‌ಗಳನ್ನು ಪಡೆದಿದ್ದು, ಇದು ಜಿಲ್ಲೆಯಲ್ಲಿಯೇ ಅತ್ಯಧಿಕ ರ್‍ಯಾಂಕ್‌ಗಳನ್ನು ಪಡೆದ ಕಾಲೇಜು ಎಂಬ ಹೆಗ್ಗಳಿಕೆಗೆ ದವನ್ ಪಾತ್ರವಾಗಿದೆ.

ಬಿ.ಬಿ.ಎಂ. ಪದವಿಯಲ್ಲಿ ಗುಂಜನ್ ಆರ್.ಜೈನ್ 3ನೇ ರ್‍ಯಾಂಕ್, ದಿಶನಾ ಕೆ.ಜೈನ್ 4ನೇ ರ್‍ಯಾಂಕ್, ಕೆ. ಅಕ್ಷತಾ 5ನೇ ರ್‍ಯಾಂಕ್, ಕುಂದನ್ ಡಿ.ಜೈನ್ 8ನೇ ರ್‍ಯಾಂಕ್, ದರ್ಶಿತಾ ಎಸ್. ಜೈನ್ 10ನೇ ರ್‍ಯಾಂಕ್ ಮತ್ತು ಬಿ.ಸಿ.ಎ ಪದವಿಯಲ್ಲಿ ವಿನಯ್ ಎಸ್.ಎಂ 4ನೇ ರ್‍ಯಾಂಕ್, ಕಾವ್ಯ ಬಿ.ಎಸ್. 10ನೇ ರ್‍ಯಾಂಕ್ ಹಾಗೂ ಬಿ.ಕಾಂ. ಪದವಿಯಲ್ಲಿ ರಶ್ಮಿ ಡಿ.ಎಸ್. 4ನೇ ರ್‍ಯಾಂಕ್ ಪಡೆದಿರುತ್ತಾರೆ.

ರ್‍ಯಾಂಕ್ ಪಡೆದು ಕಾಲೇಜಿಗೆ ಕೀರ್ತಿ ತಂದ ವಿದ್ಯಾರ್ಥಿ–ವಿದ್ಯಾರ್ಥಿನಿಯರನ್ನು ಸಂಸ್ಥೆಯ ಕಾರ್ಯದರ್ಶಿ ವೀರೇಶ್ ಪಟೇಲ್, ಜಂಟಿ ಕಾರ್ಯದರ್ಶಿ ಡಾ. ಜಿ.ಎಸ್. ಅಂಜು, ನಿರ್ದೇಶಕರಾದ ಹರ್ಷರಾಜ್ ಎ.ಗುಜ್ಜರ್, ಶೈಕ್ಷಣಿಕ ಸಲಹೆಗಾರ ಪ್ರೊ. ಬಾತಿ ಬಸವರಾಜ್, ಉಪ ಪ್ರಾಚಾರ್ಯರಾದ ಶ್ರೀಮತಿ ಎನ್. ಅನಿತಾ, ಬಿಬಿಎ ವಿಭಾಗದ ಮುಖ್ಯಸ್ಥ ಪ್ರೊ. ಶಂಕರ್, ಬಿ.ಕಾಂ ವಿಭಾಗದ ಮುಖ್ಯಸ್ಥ ಪ್ರೊ. ಚಂದನ್, ಕಛೇರಿ ಮುಖ್ಯಸ್ಥರಾದ ಮಧುಕರ್ ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ದುಗ್ಗಮ್ಮನ ಜಾತ್ರೆ ಇಂದು ಹಂದರ ಕಂಬದ ಪೂಜೆ



ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಬರುವ ಮಾರ್ಚ್ ಮಾಹೆಯಲ್ಲಿ ನಡೆಯಲಿದ್ದು, ಜಾತ್ರೆಗೆ ಸಿದ್ಧತೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಹಂದರ ಕಂಬದ ಪೂಜಾ ಕಾರ್ಯಕ್ರಮ ಇಂದು ಬೆಳಿಗ್ಗೆ 10.30ಕ್ಕೆ ಜರುಗಲಿದೆ. ಹಿರಿಯ ಶಾಸಕರೂ ಆಗಿರುವ ದೇವಸ್ಥಾನ ಟ್ರಸ್ಟ್ ಗೌರವಾಧ್ಯಕ್ಷ ಡಾ.ಶಾಮನೂರು ಶಿವಶಂಕರಪ್ಪ ಅವರ ಅಧ್ಯಕ್ಷತೆಯಲ್ಲಿ ದೇವಸ್ಥಾನದ ಪುರೋಹಿತರಾದ ನಾಗರಾಜ್ ಜೋಯಿಸ್ ಅವರು ಪೂಜಾ ಕಾರ್ಯಕ್ರಮವನ್ನು ನಡೆಸಿಕೊಡುವರು. ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ದೇವಸ್ಥಾನದ ಟ್ರಸ್ಟಿ ಗೌಡ್ರು ಚನ್ನಬಸಪ್ಪ ಕೋರಿದ್ದಾರೆ.

## ಶ್ಯಾಬನೂರಿನಲ್ಲಿ ಈಶ್ವರ ಸ್ವಾಮಿ ದೇವಸ್ಥಾನದ ಕಳಸಾರೋಹಣ






ದಾವಣಗೆರೆ,ಫೆ.7 - ಶ್ಯಾಬನೂರಿನಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಈಶ್ವರ ಸ್ವಾಮಿ ದೇವಸ್ಥಾನದ ಉದ್ಘಾಟನೆ ಮತ್ತು ಕಳಸಾರೋಹಣ ಕಾರ್ಯಕ್ರಮವು ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಇಂದು ನಡೆಯಿತು. ಕಾರ್ಯಕ್ರಮದ ನಂತರ ಮಧ್ಯಾಹ್ನ ಅನ್ನ ಸಂತರ್ಪಣೆ ಏರ್ಪಾಡಾಗಿತ್ತು.

## ಗಾಂಧಿ ನಗರದ ಹೊರಟ್ಟಿ ದುರ್ಗಾಂಬಿಕಾ ದೇವಿಯ ಹಂದರ ಕಂಬದ ಪೂಜೆ ಇಂದು



ಗಾಂಧಿನಗರ, 5ನೇ ಕ್ರಾಸ್‌ನಲ್ಲಿರುವ ಶ್ರೀ ಹೊರಟ್ಟಿ ದುರ್ಗಾಂಬಿಕಾ ದೇವಿಯ ಜಾತ್ರೆಯ ಅಂಗವಾಗಿ ಇಂದು ಬೆಳಿಗ್ಗೆ 10.30ಕ್ಕೆ ದೇವಸ್ಥಾನದ ಮುಂಭಾಗದಲ್ಲಿ ಹಂದರ ಕಂಬದ ಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪುರೋಹಿತ ದಾನಯ್ಯ ಶಾಸ್ತ್ರಿಯವರು ಶಾಸ್ತ್ರವನ್ನು ನೆರವೇರಿಸುವರು. ಪೂಜೆಯಲ್ಲಿ ದೇವಸ್ಥಾನ ಟ್ರಸ್ಟ್‌ನ ಗೌರವಾಧ್ಯಕ್ಷ ಎನ್. ನೀಲ ಗಿರಿಯಪ್ಪ, ಅಧ್ಯಕ್ಷ ಎಲ್.ಎಂ. ಹನುಮಂತಪ್ಪ, ಕಾರ್ಯಾಧ್ಯಕ್ಷ ಬಿ.ಹೆಚ್. ವೀರ ಭದ್ರಪ್ಪ, ಖಜಾಂಚಿ ಬಿ.ಎಂ. ರಾಮಸ್ವಾಮಿ ಅವರುಗಳು ಉಪಸ್ಥಿತರಿರುವರು.

## ನಗರದಲ್ಲಿಂದು ಸವಿತಾ ಮಹರ್ಷಿ ಜಯಂತಿ



ಕೊಂಡಜ್ಜಿ ರಸ್ತೆಯ ಸವಿತಾ ಸಮಾಜ ಸಂಘ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಸ್ಥಳೀಯ ಜಿಲ್ಲಾಡಳಿತ ಭವನದ ಜಿಲ್ಲಾ ಸಭಾಂಗಣದಲ್ಲಿ ವತಿಯಿಂದ ಶ್ರೀ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮ ನಡೆಯಲಿದೆ ಎಂದು ಸವಿತಾ ಸಮಾಜದ ಅಧ್ಯಕ್ಷ ಎನ್. ರಂಗಸ್ವಾಮಿ, ಕಾರ್ಯದರ್ಶಿ ಜಿ.ಎಸ್. ಪರಶುರಾಮ್, ಖಜಾಂಚಿ ಆರ್. ಕರಿಬಸಪ್ಪ ತಿಳಿಸಿದ್ದಾರೆ.

# ಲತಾ - ಸುತಾರ್ ದೇಶಕ್ಕಾಗಿ ದುಡಿದ, ಮಿಡಿದ ಹೃದಯಗಳು



ದಾವಣಗೆರೆ, ಫೆ.7- ಗಾನಕೋಗಿಲೆ, ಭಾರತ ರತ್ನ ಲತಾ ಮಂಗೇಶ್ಕರ್ ಹಾಗೂ ಕನ್ನಡದ ಕಬೀರ್ ಎಂದೇ ಕನ್ನಡ ನಾಡಿನಲ್ಲಿ ಹೆಸರಾಗಿದ್ದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಇಬ್ರಾಹಿಂ ಸುತಾರ ಈ ಇಬ್ಬರೂ ಮಹಾನ್ ಚೇತನಗಳು ತಮ್ಮ ಪ್ರತಿಭೆ ಮುಖೇನ ದೇಶಕ್ಕಾಗಿ ದುಡಿದ ಮತ್ತು ಮಿಡಿದ ಹೃದಯಗಳು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಕಂಬನಿ ಮಿಡಿದರು.

ಅವರು, ಇಂದು ನಗರದ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇಬ್ರಾಹಿಂ ಸುತಾರ ಹಾಗೂ ಲತಾ ಮಂಗೇಶ್ಕರ್ ಅವರ ನಿಧನದ ಗೌರವಾರ್ಥ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದರು.

ಲತಾ ಮಂಗೇಶ್ಕರ್ ಅವರು ಯಾವುದೇ ಹಾಡನ್ನು ಅನುಭವಿಸಿ ಹಾಡುತ್ತಾ ಆ ಹಾಡಿನ ಅರ್ಥಕ್ಕೆ ಜೀವ ತುಂಬಿ ಜನರಿಗೆ ಮಿಡಿಯುವಂತೆ ಸುಮಧುರ ಹಾಡನ್ನು ಹಾಡುತ್ತಿದ್ದರು. ಹಾಗಾಗಿಯೇ ಅವರು ಭಾರತೀಯ ಚಿತ್ರ ರಂಗದ ಶ್ರೇಷ್ಠ ಗಾಯಕರಾದರು. ಅಂತೆಯೇ ಇಬ್ರಾಹಿಂ ಸುತಾರರು ವಚನ ಸಾಹಿತ್ಯ, ಶರಣ ಸಾಹಿತ್ಯ, ಸೂಫಿ ಸಾಹಿತ್ಯಗಳ ಮುಖೇನ ಮನಸ್ಸುಗಳನ್ನು ಬೆಸೆಯುವ ಸೌಹಾರ್ದದ ಕನಸುಗಾರರಾಗಿದ್ದರು ಎಂದು ಸ್ಮರಿಸಿದರು.

ಹಿರಿಯ ಪತ್ರಕರ್ತ, ರಂಗಕರ್ಮಿ ಬಾ.ಮ. ಬಸವರಾಜಯ್ಯ ಮಾತನಾಡಿ, ಇಬ್ರಾಹಿಂ ಎನ್. ಸುತಾರ ಅವರು ಭಾವೈಕ್ಯತೆ ಬೆಳೆಸುವ ಅಗಾಧ ಪ್ರಯತ್ನ ಮಾಡಿದ್ದಾರೆ. ಕಳೆದ ಐದು ದಶಕಗಳಿಂದ ನಿರಂತರವಾಗಿ ನಾಡಿನಾದ್ಯಂತ ಸಾಹಿತ್ಯ ವಾಚನ, ಪ್ರವಚನ, ಭಜನೆ ಮತ್ತು ಸಮಾಜ ಸೇವೆಯ ಮುಖಾಂತರ ಸರ್ವ ಮಹಾತ್ಮರ ಸಾಹಿತ್ಯವನ್ನು ಬಳಸಿ ಭಾವೈಕ್ಯತೆಯಯ ಸಂದೇಶವನ್ನು ಸಾರಿದ್ದರು ಎಂದು ನುಡಿನ ಮನ ಸಲ್ಲಿಸಿದರು.

ಜಿಲ್ಲಾ ಕಸಾಪ ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ತಾಲ್ಲೂಕು ಅಧ್ಯಕ್ಷರಾದ ಸುಮತಿ ಜಯಪ್ಪ, ಎಲ್. ನಾಗವೇಣಿ, ಪ್ರೊ. ದಾದಾಪೀರ್ ನವಿಲೇಹಾಳ್, ಪ್ರೊ. ಜಿ.ಬಿ. ಚಂದ್ರಶೇಖರಪ್ಪ, ಎಸ್.ಎಂ.ಮಲ್ಲಮ್ಮ, ದಾಗಿನಕಟ್ಟೆ ಪರಮೇಶ್ವರಪ್ಪ ಸೇರಿದಂತೆ ಇತರರು ನುಡಿ ನಮನ ಸಲ್ಲಿಸಿದರು.

ಲತಾ ಮಂಗೇಶ್ಕರ್ ಅವರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕನ್ನಡ ಚಲನಚಿತ್ರದಲ್ಲಿ ಹಾಡಿದ್ದ ಬೆಳ್ಳನೆ ಬೆಳಗಾಯಿತು ಹಾಡನ್ನು ಜಾನಪದ ಅಕಾಡೆಮಿ ಸದಸ್ಯರಾದ ರುದ್ರಾಕ್ಷಿ ಬಾಯಿ ಪುಟ್ಟ ನಾಯ್ಕ್ ಅವರು ಹಾಡುವ ಮೂಲಕ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಸಾಪ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ ಧನ್ಯವಾದ ಸಮರ್ಪಿಸಿದರು.

ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಯೆಪ್ಪ, ನಿವೃತ್ತ ಪ್ರಾಚಾರ್ಯರಾದ ಓ. ನಾಗೇಂದ್ರಪ್ಪ, ಪ್ರೊ. ಮಂಜಣ್ಣ, ಕೆ. ವೀಣಾ, ಎಲ್. ನಾಗವೇಣಿ, ಇಂದಿರಾ ಗುರುಸ್ವಾಮಿ, ಪಾಲಾಕ್ಷಪ್ಪ ಗೋಪನಾಳ್, ಭೈರವೇಶ್ವರ, ಬೇತೂರು ಷಡಾಕ್ಷರಪ್ಪ, ಬಿ.ಎಸ್. ಜಗದೀಶ್, ಗೋಪನಾಳ್ ಕರಿಬಸಪ್ಪ, ಬಕ್ಕೇಶ್ ನಾಗನೂರು, ಪತ್ರಕರ್ತ ಜಿಗಳಿ ಪ್ರಕಾಶ್, ಡಾ. ರುದ್ರಮುನಿ ಹಿರೇಮಠ, ರಾಜೀವ್ ಮಲೇಬೆನ್ನೂರು, ಲೋಕೇಶ್, ಶ್ರೀನಿವಾಸ್, ಕಿರ್ಲೋಸ್ಕರ್ ರಾಜಗೋಪಾಲ್ ಸೇರಿದಂತೆ ಇತರರು ಇದ್ದರು.

# ಪ್ರಚೋದನಕಾರಿ ಮಾಹಿತಿ: ಕ್ರಮಕ್ಕೆ ಆಗ್ರಹ

## ಹರಿಹರ ಪೊಲೀಸ್ ಠಾಣೆ ಮುಂದೆ ಜಮಾಯಿಸಿದ ಗುಂಪು



ಹರಿಹರ, ಫೆ.7 – ಪ್ರಾರ್ಥನಾ ಮಂದಿರವೊಂದರ ಚಿತ್ರವನ್ನು ಪ್ರಚೋದನಕಾರಿಯಾಗಿ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಲಾಗಿದೆ ಎಂಬ ಆರೋಪ ನಗರದಲ್ಲಿ ಉದ್ವಿಗ್ನತೆಗೆ ಕಾರಣವಾಗಿದೆ. ಯುವಕನೋರ್ವ ಪವಿತ್ರ ಸ್ಥಳವನ್ನು ನಿಂದಿಸಿ ಎರಡು ಕೋಮುಗಳ ನಡುವೆ ದ್ವೇಷ ತರುವ ಯತ್ನ ನಡೆಸಿದ್ದಾನೆ ಎಂದು ಹೆಚ್.ಹಿದಾಯತ್ ಎಂಬುವವರು ನಗರ ಠಾಣೆ ಪೊಲೀಸರಲ್ಲಿ ದೂರು ದಾಖಲಿಸಿದ್ದಾರೆ. ಕೋಮು ದ್ವೇಷಕ್ಕೆ ಕಾರಣವಾಗುವ ರೀತಿಯಲ್ಲಿ ಜಾಲತಾಣಗಳಲ್ಲಿ ಚಿತ್ರಗಳನ್ನು ಪ್ರಕಟಿಸಿರುವ ವ್ಯಕ್ತಿಯ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಅವರು ಒತ್ತಾಯಿಸಿದ್ದಾರೆ.

ಈ ನಡುವೆಯೇ, ಪೆಟ್ರೋಲ್ ಬಂಕ್ ಒಂದರಲ್ಲಿ ಬೇರೆ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ಗುಂಪುಗಳ ನಡುವೆ ಚಕಮಕಿ ನಡೆದಿತ್ತು ಈ ಸಂದರ್ಭದಲ್ಲಿ ಒಬ್ಬ ಹುಡುಗನ ತಲೆಗೆ ಹೊಡೆಯಲಾಗಿತ್ತು. ಈ ಘಟನೆಗೆ ಸಂಬಂಧಿಸಿದಂತೆ ಜನರು ನಗರದ ಪೊಲೀಸ್ ಠಾಣೆಯ ಮುಂದೆ ನೆರೆದಿದ್ದರು.

ಪ್ರಾರ್ಥನಾ ಮಂದಿರದ ಪ್ರಕರಣಕ್ಕೆ ಸಂಬಂಧಿಸಿದಂತೆ ಇವರು ಠಾಣೆಯಲ್ಲಿ ಸೇರಿದ್ದಾರೆ ಎಂಬ ತಪ್ಪು ಕಲ್ಪನೆ ಉಂಟಾಗಿ ಇನ್ನಷ್ಟು ಜನರು ಠಾಣೆಯ ಬಳಿ ಜಮಾಯಿಸಿದರು. ಜನರನ್ನು ಚೆದುರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು.

ನಗರಸಭಾ ಸದಸ್ಯರಾದ ಜಾವೀದ್, ಮುಜಾಮಿಲ್ ಬಿಲ್ಲು, ಮುಖಂಡರಾದ ದಾದಾಪೀರ್, ಸನಾವುಲ್ಲಾ, ಹಬೀಬ್, ಹಾಜಿ ಅಲಿ ಹಾಗೂ ಬಿಜೆಪಿ ಘಟಕದ ಅಧ್ಯಕ್ಷ ಅಜಿತ್ ಸಾವಂತ್ ಹಾಗೂ ಹಿಂದೂ ಸಂಘಟನೆಯ ಮುಖಂಡರಾದ ರವಿ ರಾಯ್ಕರ್ ಮತ್ತಿತರರು ಸಂದರ್ಭದಲ್ಲಿದ್ದರು.

ಸಿಪಿಐ ಸತೀಶ್ ಕುಮಾರ್ ಹಾಗೂ ಪಿಎಸ್‌ಐ ಬಸವರಾಜ ತೇಲಿ ಸೇರಿದಂತೆ ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದರು.

## ಇಂದು ನಡೆಯಬೇಕಿದ್ದ ಕಡಲಬಾಳ ಶ್ರೀ ಮಧ್ವನವಮಿ ಕಾರ್ಯಕ್ರಮ ರದ್ದು

ದಾವಣಗೆರೆ ತಾಲ್ಲೂಕಿನ ಶ್ರೀಕ್ಷೇತ್ರ ಕಡಲಬಾಳು, ಶ್ರೀ ಹನುಮ ಭೀಮ ಮಧ್ವ ಸೇವಾ ಚಾರಿಟಬಲ್ ಟ್ರಸ್ಟ್‌ನಿಂದ ಇತಿಹಾಸ ಪ್ರಸಿದ್ಧ ಶ್ರೀಮಧ್ವ ನವಮಿ ರಥೋತ್ಸವವನ್ನು ಇಂದು ಹಮ್ಮಿಕೊಳ್ಳಲಾಗಿತ್ತು. ಕೋವಿಡ್ ನಿಯಮದ ಕಾರಣ ರಥಸಪ್ತಮಿ, ಭೀಷ್ಮಾಷ್ಟಮಿ, ಮಧ್ವನವಮಿ ಹಾಗೂ ಸತ್ಯನಾರಾಯಣ ಪೂಜೆ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದೆ ಎಂದು ಶ್ರೀ ಹನುಮ ಭೀಮ ಮಧ್ವ ಸೇವಾ ಚಾರಿಟಬಲ್ ಟ್ರಸ್ಟ್ ತಿಳಿಸಿದೆ.

## ಉಪ ತಹಶೀಲ್ದಾರ್ ಅಮಾನತ್ತು

**ಹರಪನಹಳ್ಳಿ**

ಹರಪನಹಳ್ಳಿ, ಫೆ. 7- ಭೂ ಮಂಜೂರಾತಿ ಪಡೆದ ಮೂಲ ವ್ಯಕ್ತಿಯ ಮರಣಾ ನಂತರ, ಆತನ ವಾರಸುದಾರರಲ್ಲದ ಬೇರೊಬ್ಬ ವ್ಯಕ್ತಿಗೆ ಭೂಮಿಯ ಹಕ್ಕು ಬದಲಾವಣೆ ಮಾಡಿ, ಕರ್ತವ್ಯಲೋಪ ಎಸಗಿದ ಆರೋಪದ ಹಿನ್ನೆಲೆಯಲ್ಲಿ ತಾಲ್ಲೂಕಿನ ಚಿಗಟೇರಿ ಹೋಬಳಿ ಉಪ ತಹಶೀಲ್ದಾರ್ ಎಸ್. ಚಂದ್ರಶೇಖರ್ ಅವರನ್ನು ಕಲಬುರಗಿ ಪ್ರಾದೇಶಿಕ ಆಯುಕ್ತರು ಅಮಾನತ್ತು ಪಡಿಸಿ ಆದೇಶ ಹೊರಡಿಸಿದ್ದಾರೆ.

ಅಮಾನತ್ತು ಶಿಕ್ಷೆಗೆ ಒಳಗಾಗಿರುವ ಎಸ್. ಚಂದ್ರಶೇಖರ್ ಅವರು, ಈ ಹಿಂದೆ ಹರಪನಹಳ್ಳಿ ಕಂದಾಯ ನಿರೀಕ್ಷಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ತಪ್ಪು ವಂಶವೃಕ್ಷದ ಆಧಾರದ ಮೇಲೆ ಭೂಮಿಯ ಹಕ್ಕು ಬದಲಾವಣೆಗೆ ಆದೇಶ ಹೊರಡಿಸಿರುವ ಆರೋಪದ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ದೂರು ದಾಖಲಾಗಿತ್ತು.

ವಿಚಾರಣೆ ಕೈಗೊಂಡು, ವರದಿ ಸಲ್ಲಿಸುವಂತೆ ಬಳ್ಳಾರಿ ಜಿಲ್ಲಾಧಿಕಾರಿ ಅವರಿಗೆ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ವಿಚಾರಣೆ ಕೈಗೊಂಡ ಜಿಲ್ಲಾಧಿಕಾರಿಗಳು, ಪ್ರಕರಣದಲ್ಲಿ ಗ್ರಾಮ ಲೆಕ್ಕಾಧಿಕಾರಿ ಅರವಿಂದ ಎಂಬುವವರ ವಿರುದ್ಧ ವಿಚಾರಣೆ ಜರುಗಿಸುತ್ತಿದ್ದು, ಇನ್ನೋರ್ವ ಆಪಾದಿತ ಉಪತಹಶೀಲ್ದಾರ್ ಎಸ್. ಚಂದ್ರಶೇಖರ ಅವರ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಜಿಲ್ಲಾಧಿಕಾರಿ ದೋಷಾರೋಪ ಪಟ್ಟಿಯಲ್ಲಿನ ದಾಖಲೆಗಳನ್ನು ಪರಿಶೀಲಿಸಿದ ಪ್ರಾದೇಶಿಕ ಆಯುಕ್ತರು, ಜಮೀನು ವಹಿವಾಟಿನಂತ ಗಂಭೀರ ಪ್ರಕರಣಗಳಲ್ಲಿಯೂ ಸಹ ಮೂಲ ಪಟ್ಟಾದಾರರ ಸಮಕ್ಷಮ ಹಾಗೂ ದಾಖಲೆಗಳನ್ನು ಸಹ ಕೂಲಂಕಷವಾಗಿ ಪರಿಶೀಲಿಸದೆ ಭೂಮಿ ಹಕ್ಕು ಬದಲಾವಣೆ ಮಾಡಿರುವುದು ಭೂಕಂದಾಯ ಹಾಗೂ ನಿಯಮಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿದ ಗುರುತರವಾದ ಆರೋಪ ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಉಪತಹಶೀಲ್ದಾರ್ ಚಂದ್ರಶೇಖರ್ ವಿರುದ್ಧ ವಿಚಾರಣೆ ಕಾಯ್ದಿರಿಸಿ, ಪ್ರಾದೇಶಿಕ ಆಯುಕ್ತ ಡಾ. ಎ.ಎನ್.ಮೂರ್ತಿ ಅಮಾನತ್ತು ಆದೇಶ ಹೊರಡಿಸಿದ್ದಾರೆ.

## ನಗರದಲ್ಲಿ ಇಂದು ಅಖಂಡ ಸೂರ್ಯ ನಮಸ್ಕಾರ ಕಾರ್ಯಕ್ರಮ

ರಥ ಸಪ್ತಮಿ ಅಂಗವಾಗಿ ಇಂದು ಮುಂಜಾನೆ 5.30 ರಿಂದ 8.30 ರವರೆಗೆ ನಗರದ ಪ್ರಕ್ಷಣೀಯ ಸ್ಥಳವಾಗಿರುವ ಗಾಜಿನ ಆವರಣದಲ್ಲಿ 108 ಸಾಮೂಹಿಕ ಸೂರ್ಯ ನಮಸ್ಕಾರವನ್ನು ಮಾಡುವುದರೊಂದಿಗೆ ಭಾರತ ಮಾತೆಯ ಪಾದ ಪದ್ಮಗಳಿಗೆ ಸಮರ್ಪಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ವತಿಯಿಂದ ಲೋಕ ಕಲ್ಯಾಣಾರ್ಥ ಮತ್ತು ಆರೋಗ್ಯವಂತ ಸಮಾಜಕ್ಕಾಗಿ 75ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಈ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ವಿವರಕ್ಕೆ ಸಂಪರ್ಕಿಸಿ : 94800-65558 ಅಥವಾ 94481-29399.

# ಅರಸೀಕೆರೆ : ಅನಧಿಕೃತ ಗೂಡಂಗಡಿ ತೆರವು ಕಾರ್ಯಾಚರಣೆ



ಹರಪನಹಳ್ಳಿ, ಫೆ. 7- ತಾಲ್ಲೂಕಿನ ಪ್ರಮುಖ ಹೋಬಳಿ ಕೇಂದ್ರ ಸ್ಥಾನವಾದ ಅರಸೀಕೆರೆ ಗ್ರಾಮದ ಬಸ್‌ನಿಲ್ದಾಣ, ಚಿಕ್ಕಕೆರೆ ಹಾಗೂ ಅದರ ಅಕ್ಕಪಕ್ಕದಲ್ಲಿ ತಲೆ ಎತ್ತಿನಿಂತಿದ್ದ ಅನಧಿಕೃತ ಗೂಡಂಗಡಿಗಳ ತೆರವು ಕಾರ್ಯಾಚರಣೆ ಕಾರ್ಯ ಸೋಮವಾರ ಬೆಳಿಗ್ಗೆ ನಡೆಯಿತು.

ಅರಸೀಕೆರೆ ದಾವಣಗೆರೆ, ಜಗಳೂರು, ಕೊಟ್ಟೂರು, ಹರಪನಹಳ್ಳಿ ಸೇರಿದಂತೆ ಮೂರ್ನಾಲ್ಕು ತಾಲ್ಲೂಕುಗಳ ಸಂಪರ್ಕ ಬೆಸೆಯುವ ಪ್ರಮುಖ ಕೇಂದ್ರವಾಗಿದ್ದು, ಗ್ರಾಮ ಬೆಳವಣಿಗೆಯಾದಂತೆಲ್ಲಾ, ವಾಹನ ಸಂಚಾರ ದಟ್ಟಣೆಯೂ ಅಧಿಕವಾಗಿದೆ. ಹೀಗಾಗಿ ಗೂಡಂಗಡಿಗಳು ಬಸ್‌ನಿಲ್ದಾಣಕ್ಕೆ ಹೊಂದಿಕೊಂಡಂತೆ ವ್ಯಾಪಾರ ವಹಿವಾಟು ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಸಾರ್ವಜನಿಕರ ಸಂಚಾರಕ್ಕೆ ಸಾಕಷ್ಟು ತೊಂದರೆ ಆಗುತ್ತಿತ್ತು.

ಜತೆಗೆ, ನಾಲ್ಕಾರು ತಾಲ್ಲೂಕುಗಳ ಸಂಪರ್ಕ ಬೆಸೆಯುವ ಕೇಂದ್ರಸ್ಥಾನವಾದ ಹಿನ್ನೆಲೆಯಲ್ಲಿ ಹಾಗೂ ಮಂಡ್ಯ- ಹೂವಿನಹಡಗಲಿ ರಾಜ್ಯಹೆದ್ದಾರಿ ಗ್ರಾಮದ ಮೂಲಕ ಹಾದು ಹೋಗಿದೆ. ಹೀಗಾಗಿ, ಶಾಸಕ ಎಸ್.ವಿ. ರಾಮಚಂದ್ರ ಅವರ ಮುತುವರ್ಜಿಯಿಂದಾಗಿ, ಈಗಾಗಲೇ ಗ್ರಾಮದಲ್ಲಿ ನೂತನ ಬಸ್‌ನಿಲ್ದಾಣ ನಿರ್ಮಾಣ, ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಗಾಗಿ ಅನುದಾನವೂ ಸಹ ಬಿಡುಗಡೆಯಾಗಿದೆ. ಈ ಹಿನ್ನೆಲೆಯಲ್ಲಿ ಆರಂಭದಲ್ಲಿ ಬಸ್‌ನಿಲ್ದಾಣ ಹಾಗೂ ಅದಕ್ಕೆ ಹೊಂದಿಕೊಂಡಿರುವ ಚಿಕ್ಕಕೆರೆ ಅಕ್ಕಪಕ್ಕದಲ್ಲಿನ ಗೂಡಂಗಡಿಗಳ ತೆರವು ಕಾರ್ಯಾಚರಣೆ ನಡೆಸಲಾಯಿತು.

ಜಗಳೂರು ಮತ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಅರಸೀಕೆರೆ ಗ್ರಾಮದಲ್ಲಿ ಪೌರಾಣಿಕ ಹಾಗೂ ಶೋಷಿತ ಸಮುದಾಯದ ಸಾಂಸ್ಕೃತಿಕ ಪರಂಪರೆ ಬಿಂಬಿಸುವ ದಂಡಿನ ದುರುಗಮ್ಮದೇವಿ ಜಾತ್ರೆ ಹಾಗೂ ಗ್ರಾಮದ ಸಮೀಪದಲ್ಲಿರುವ ಉಚ್ಚಂಗಿದುರ್ಗದ ಐತಿಹಾಸಿಕ ಉತ್ಸವಾಂಭ ಜಾತ್ರೆಗಳು ಈ ಭಾಗದ ಬಹುದೊಡ್ಡ ಧಾರ್ಮಿಕ ಉತ್ಸವಗಳಾಗಿರುವುದರಿಂದ ಸಹಜವಾಗಿಯೇ ಇಲ್ಲಿ ದೊಡ್ಡ ಜನ ಜಂಗುಳಿಯೇ ನೆರೆಯುತ್ತದೆ.

ಗ್ರಾಮದ ಅಭಿವೃದ್ಧಿ ಹಿತಾಸಕ್ತಿಯಿಂದ ಅಂಗಡಿಗಳ ಮಾಲೀಕರು ಸಹ ತೆರವುಗೊಳಿಸಲು ಸಹಕಾರ ನೀಡಿದ್ದಾರೆ. ಶೀಘ್ರದಲ್ಲಿಯೇ ನಿಗದಿತ ಅವಧಿಯಲ್ಲಿ ಬಸ್‌ನಿಲ್ದಾಣ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಿ, ಅದಕ್ಕೆ ಹೊಂದಿಕೊಂಡಂತೆ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಈಗಾಗಲೇ ನೀಲಿನಕ್ಷೆ ರೂಪಿಸಲಾಗಿದ್ದು, ವಾಣಿಜ್ಯ ಮಳಿಗೆಗಳು ಪೂರ್ಣಗೊಂಡ ಬಳಿಕ, ವ್ಯಾಪಾರಸ್ಥರ ವ್ಯಾಪಾರ, ವಹಿವಾಟಿಗೆ ಪುನಃ ಅವಕಾಶ ಕಲ್ಪಿಸಲಾಗುವುದು ಎಂದು ಶಾಸಕ ಎಸ್.ವಿ. ರಾಮಚಂದ್ರಪ್ಪ ತಿಳಿಸಿದರು.

ಗ್ರಾಮ ಪಂಚಾಯ್ತಿ ಕೈಗೆತ್ತಿಕೊಂಡಿದ್ದ ತೆರವು ಕಾರ್ಯಾಚರಣೆಗೆ ಸ್ಥಳೀಯ ಪೊಲೀಸ್ ಇಲಾಖೆಯ ಪಿಎಸ್‌ಐ ನಾಗರತ್ನ ಅವರ ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ನಿಯೋಜಿಸಲಾಗಿತ್ತು. ಅಭಿವೃದ್ಧಿ ಅಧಿಕಾರಿ ಅಂಜಿನಪ್ಪ, ಪಿಎಸ್‌ಐ ನಾಗರತ್ನ ಸೇರಿದಂತೆ ಪ್ರಮುಖರು ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಹಾಜರಿದ್ದರು.

**ಗೂಡಂಗಡಿ ತೆರವು ಕಾರ್ಯಾಚರಣೆಗೆ ವಿರೋಧ :** ಗ್ರಾಮದ ಬಸ್‌ನಿಲ್ದಾಣ ಹಾಗೂ ಚಿಕ್ಕಕೆರೆ ಸಮೀಪದಲ್ಲಿ ಸಣ್ಣಪುಟ್ಟ ಹೋಟೆಲ್, ಕಿರಾಣಿ ಅಂಗಡಿ, ಪಾನ್‌ಶಾಪ್, ಹಣ್ಣಿನ ಅಂಗಡಿ, ಕೋಳಿ ಅಂಗಡಿ ಸೇರಿದಂತೆ ವಿವಿಧ ಸಣ್ಣಪುಟ್ಟ ಅಂಗಡಿಗಳನ್ನು ನಡೆಸುವ ಮೂಲಕ ಸುಮಾರು 25-30 ಕುಟುಂಬಗಳು ಕಳೆದ 30 ವರ್ಷಗಳಿಂದಲೂ ಜೀವನ ನಡೆಸುತ್ತಿದ್ದವು. ಆದರೆ, ಈಗ ಏಕಾಏಕಿ ಅಂಗಡಿಗಳನ್ನು ತೆರವುಗೊಳಿಸುವ ಮೂಲಕ ಆ ಕುಟುಂಬಗಳ ಬದುಕಿಗೆ ಆಸರೆಯಾಗಿದ್ದ ವಾಪಾರ, ವಹಿವಾಟನ್ನು ಸ್ಥಗಿತಗೊಳಿಸುವ ಕ್ರಮ ಸರಿಯಲ್ಲ ಎಂದು ದಲಿತ, ಶೋಷಿತ ಸಮಾಜ ಸಂಘರ್ಷ ಸಮಿತಿ ತೆರವು ಕಾರ್ಯಾಚರಣೆಗೆ ವಿರೋಧ ವ್ಯಕ್ತಪಡಿಸಿದೆ.

ಅಭಿವೃದ್ಧಿ ಕಾರ್ಯಕ್ಕೆ ನಮ್ಮ ವಿರೋಧ ಇಲ್ಲ. ಆದರೆ, ಸುಮಾರು ಐವತ್ತಕ್ಕೂ ಅಧಿಕ ಕುಟುಂಬಗಳ ಜೀವನಾಧಾರಕ್ಕೆ ಆಸರೆಯಾಗಿದ್ದ ಸಣ್ಣ ವ್ಯಾಪಾರಸ್ಥರನ್ನು ಬೀದಿಪಾಲು ಮಾಡಿದ್ದು ಸರಿಯಲ್ಲ. ಕೇವಲ ಮೂರು ದಿನಗಳ ಹಿಂದೆ ಡಂಗೂರ ಸಾರುವ ಮೂಲಕ ತೆರವುಗೊಳಿಸುವಂತೆ ಸೂಚಿಸಿ ದ್ದಾರೆ. ಕೇವಲ ಮೂರೇ ದಿನಗಳಲ್ಲಿ ಹೇಗೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು ಎಂಬುದನ್ನು ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕಿತ್ತು. ಕನಿಷ್ಠ ಮೂರು ತಿಂಗಳ ಕಾಲಾವಕಾಶ ನೀಡಿದ್ದರೆ, ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವ ಮೂಲಕ ವ್ಯಾಪಾರಿಗಳೇ ಸ್ವಯಂಪ್ರೇರಿತವಾಗಿ ತೆರವು ಮಾಡುತ್ತಿದ್ದರು. ಇದು ಬಡ ಕುಟುಂಬಗಳ ಮೇಲೆ ಅಧಿಕಾರಿಗಳ ದೌರ್ಜನ್ಯದ ಕ್ರಮ ಎಂದು ದಲಿತ ಶೋಷಿತ ಸಮಾಜ ಸಂಘರ್ಷ ಸಮಿತಿಯ ವಿಜಯನಗರ ಜಿಲ್ಲಾ ಅಧ್ಯಕ್ಷ ಕಬ್ಬಳ್ಳಿ ಬಸವರಾಜ, ಸಮಿತಿ ಮುಖಂಡರಾದ ಹಾದಿಮನಿ ನಾಗರಾಜ, ಕೆ. ರಾಜಪ್ಪ, ಮುಜಾಮಿಲ್, ಮಕರಬ್ಬಿ ಹುಲುಗಪ್ಪ, ಕೆ. ಅಭಿಷೇಕ, ಎ.ಬಿ. ಪ್ರದೀಪಗೌಡ, ಎ.ಬಿ. ಶಂಭುಲಿಂಗನಗೌಡ, ಎಂ.ಎಸ್. ಶ್ರೀನಿವಾಸಶೆಟ್ಟಿ ಹಾಗೂ ಇತರರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.


॥ ಶ್ರೀ ವೀತರಾಗಾಯ ನಮಃ ॥ ॥ ಶ್ರೀ ಪದ್ಮಾವತಿದೇವಿ ಪ್ರಸನ್ನ॥

**ಹದಿನೆಂಟನೇ ವರ್ಷದ ಚಿರಸ್ಮರಣೆ**



ದಿ. ಶ್ರೀ ಬೇತೂರು ಕುಬೇರಪ್ಪ

ಜನನ: 14-05-1933

ನಿಧನ: 08-02-2004

ನೀವು ನಮ್ಮನ್ನಗಲಿ ಇಂದಿಗೆ ಹದಿನೆಂಟು ವರ್ಷಗಳು ಕಳೆದವು.

ಸದಾ ನಿಮ್ಮ ಸ್ಮರಣೆಯಲ್ಲಿರುವ:

ಮಗಳು: ಶ್ರೀಮತಿ ಬಿ.ಕೆ. ಅರ್ಚನಾ,

ಅಳಿಯ : ಶ್ರೀ ಡಿ. ಮಹಾವೀರ್,

ಪ್ರೀತಿಯ ಮೊಮ್ಮಗಳು : ಕು॥ ಎಂ. ಲಕ್ಷ್ಮಿ,

ಪದ್ಮಾಂಬ ಕಾಂಪ್ಲೆಕ್ಸ್, ದಾವಣಗೆರೆ.

ಬೇತೂರು ಕುಟುಂಬ ವರ್ಗದವರು

ಶ್ರೀ ಮಹಾವೀರ ಆಟೋಮೊಬೈಲ್ಸ್, ರಾಣೇಬೆನ್ನೂರು.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte